ಯಕ್ಷಗಾನ ಪ್ರಸಂಗ

# ಅಶೋಕಸುಂದರಿ ಕಲ್ಯಾಣ

ಕವಿ

## ಕೊರ್ಗಿ ಸೂರ್ಯನಾರಾಯಣ ಉಪಾಧ್ಯಾಯ


ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®



Email: yakshaprasangakosha@gmail.com

Blog: www.yakshaprasangakosha.yakshavahini.com



ಆವೃತ್ತಿ ೧.೦

ಜನವರಿ ೧೪, ೨೦೨೧

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.


ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು


ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು


ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ವಿಷ್ಣುಪುರಾಣ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಅಪ್ರಕಟಿತ

**ಹಕ್ಕುಸ್ವಾಮ್ಯ ವಿವರ:**
ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೪೦೬

**ಪಾತ್ರಗಳು:**
ದೇವೇಂದ್ರ, ದೇವತೆಗಳು, ಬೃಹಸ್ಪತಿ, ಆಯುರಾಜ, (ಮಾಹೀಷ್ಮತೀ ಅರಸ), ಸುಶೀಲ (ಮಂತ್ರಿ), ಧೌಮ್ಯ ಋಷಿ, ಶಿಷ್ಯರು, ದತ್ತಾತ್ರೇಯ ಮುನಿ, ಇಂದುಮತಿ (ಆಯುವಿನ ಪತ್ನಿ), ಹುಂಡದಾನವ (ಕಾಳಾವತೀ ಅರಸ), ರಕ್ಕಸ ಬಲ, ನಾರದ, ವಿದ್ಯುತೆ (ಹುಂಡನ ಮಡದಿ), ಕುಂಟಣೀ (ಸಖಿ), ಪಾಚಕ, ವಸಿಷ್ಠಮುನಿ, ಬ್ರಹ್ಮ, ಶಿವ, ಪಾರ್ವತೀ, ಅಶೋಕಸುಂದರೀ, ವಿಹುಂಡಾಸುರ (ಹುಂಡನ ಮಗ), ಶುಕ್ರಾಚಾರ್ಯ, ವನಪಾಲಕರು, ಕಿರಾತರು, ಆದಿಮಾಯೆ.

**ಕಥಾ ಸಾರಾಂಶ:**
ದೇವೇಂದ್ರ ದೇವತೆಗಳೊಡಗೂಡಿ ಸ್ವರ್ಗದಲ್ಲಿದ್ದಾಗ, ಹುಂಡಾಸುರನ ಭೀತಿ. ಅದನ್ನು ಗುರುವಿನಲ್ಲಿ ಬಿತ್ತರಿಸಿದಾಗ, ವಿಷ್ಣುವಿನ ಮೊರೆಹೊಗಲು ಸೂಚನೆ. ವಿಷ್ಣುವಿನ ಅಭಯ. ಮಾಹೀಷ್ಮತಿಯ ಅರಸ ಆಯುರಾಜ ದತ್ತಾತ್ರೇಯಾನುಗ್ರಹದಿಂದ ಇಂದುಮತಿಯಲ್ಲಿ ಪುತ್ರನನ್ನು ಪಡೆಯುವಳು. ಆತನೇ ನಹುಷ. ನಾರದರ ಮಾತಿನಂತೆ ಹುಂಡದಾನವ ನಹುಷನನ್ನು ಅಪಹರಿಸಿ, ಕೊಲ್ಲುವ ಯತ್ನ ಮಾಡುವನು. ದೈವಾನುಗ್ರಹದಿಂದ ನಹುಷ ವಸಿಷ್ಠಾಶ್ರಮ ಸೇರಿ ಅಲ್ಲಿ ವಿದ್ಯಾಭ್ಯಾಸ ಮಾಡುವನು. ಬ್ರಹ್ಮನಿಂದ ವರಪಡೆದು, ಹುಂಡನನ್ನು ವಧಿಸಿ ದೇವತೋಷಿಯಾಗುವನು. ಶಿವ-ಪಾರ್ವತಿಯರು ವಿಹಾರ ಮಾಡುವಾಗ, ಅಶೋಕವೃಕ್ಷದಡಿಯಲ್ಲಿ ಪಾರ್ವತಿಗೆ ಹೆಣ್ಣುಮಗಳು ಬೇಕೆನ್ನುವ ಅಪೇಕ್ಷೆಯುಂಟಾಗಿ ಅದರಂತೇ ಅಶೋಕಸುಂದರಿಯ ಜನನ.

ಹುಂಡನ ಮಗ ವಿಹುಂಡಾಸುರ ಶಿವಾನುಗ್ರಹ ಪಡೆದು ಲೋಕಕಂಟಕನಾದಾಗ, ಅಶೋಕಸುಂದರಿಯನ್ನು ಮೋಹಿಸಿ, ಬಲಾತ್ಕರಿಸಲು ಮುಂದಾದಾಗ, ನಹುಷ ತಡೆಯುವನು. ನಂತರ ಆದಿಮಾಯೆಯು ಪ್ರಕಟಳಾಗಿ ಅಸುರನನ್ನು ವಧಿಸುವಳು. ನಹುಷನು ಅಶೋಕಸುಂದರಿಯನ್ನು ವರಿಸಿ, ಕ್ಷೇಮದಿಂದ ರಾಜ್ಯಪಾಲನೆ ಮಾಡುವ ರೋಚಕ ಕಥಾನಕ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ಕೊರ್ಗಿ ಸೂರ್ಯನಾರಾಯಣ ಉಪಾಧ್ಯರು (ಕ್ರಿ.ಶ. ೧೯೧೨ – ೧೯೭೪) ವಿದ್ವಾಂಸರು, ಪುರೋಹಿತರು, ಜ್ಯೋತಿಷಿಗಳು ಆಗಿದ್ದರು. ಇವರ ತಂದೆ ಸೀತಾರಾಮ ಉಪಾಧ್ಯಾಯ, ತಾಯಿ ಶಂಕರಿ, ಅಣ್ಣ ಲಕ್ಷ್ಮೀನಾರಾಯಣ ಉಪಾಧ್ಯಾಯ. ಇವರು ಯಕ್ಷಗಾನ ಮೇಳಗಳಲ್ಲಿ ತಿರುಗಾಟ ನಡೆಸಿದವರು. ಅನೇಕ ಯಕ್ಷಗಾನ ಸಂಘಗಳನ್ನು ಹುಟ್ಟಿಹಾಕಿ ಅಪಾರ ಸಂಖ್ಯೆಯ ಶಿಷ್ಯರನ್ನು ಪಡೆದರು. ಯಕ್ಷಗಾನ ಪ್ರಸಂಗಗಳನ್ನಲ್ಲದೇ ಅಸಂಖ್ಯ ಕೀರ್ತನೆಗಳನ್ನು ಮತ್ತು ನಾಟಕಗಳನ್ನೂ ರಚಿಸಿದ್ದರು.

ಇವರು ಬರೆದ ಪ್ರಸಂಗಗಳು: ಅಶೋಕಸುಂದರೀ ಕಲ್ಯಾಣ, ಗುರುದ್ರೋಣ, ಬಾಲ ಘಟೋತ್ಕಚ, ಯಾಮಾಗ್ನಿಯರ ಕಾಳಗ, ಮೋಹಿನೀ ಕಲ್ಯಾಣ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಮದ್ವರ್ದಿಲವೃಂದವಂದಿತಪದಂ ಕೌಮಾರಿಪ್ರೇಮಾಸ್ಪದಂ |
ಶ್ರೀಮದ್ದಕ್ಷಮಖಾಂತಕಂ ಪುರಹರಂ ದಾಮೋದರಪ್ರೀತಿದಂ ||
ಸೋಮಾರ್ಧಾದೃತಶೇಖರಂ ಮೃಗಧರಂ ಸೋಮಾರ್ಕವಹ್ನೀಕ್ಷಣಂ |
ಶ್ರೀಮತ್ಸುಂದರವಿಗ್ರಹಂ ಪಶುಪತಿಂ ರಾಮಾರ್ಚಿತಂ ಭಾವಯೇ || ೧ || 1 ||

**ವಾರ್ಧಕ**
ಗಿರಿಸುತೆಯ ತರುಣನಂ ದುರಿತಸಂಹರಣನಂ |
ಕರಿರಾಜವದನನಂ ಕರುಣಮಯಸದನನಂ |
ಸುರವ್ರಜಸ್ತೋತ್ರನಂ ಗರುಡಾರಿಸೂತ್ರನನ್ನುರುಬೃಹದ್ಗಾತ್ರನನ್ನು ||
ಕರಪಾಶಶೂಲನಂ ಧರೆಯಮರಪಾಲನಂ |
ಕರಣಯುಗಶೂರ್ಪನಂ ವರಗತಿಯ ತೋರ್ಪನಂ |
ಚರಣಕೈಗುಳ್ಳನಂ ಮಿರುಪ ಪೆರ್ಡೊಳ್ಳನಂ ಸ್ಮರಿಪೆ ಬಲ್ಪುಳ್ಳನನ್ನು || ೧ || 2 ||

**ಶರಷಟ್ಪದಿ**
ಸರಸೀರುಹಭವ | ನರಸಿಯೆ ನಿನ್ನನು |
ಸ್ಮರಿಸುವೆ ಸಂತತ ಭಕ್ತಿಯೊಳುಂ ||
ಸರಸದಿ ಕವಿ ಸುಂ | ದರತರಮಾಗಲು |
ಕರುಣಿಸು ಭಾರತಿ ಯುಕ್ತಿಯೊಳುಂ || ೧ || 3 ||

**ಕುಸುಮಷಟ್ಪದಿ**
ಶರಭವನ ಭಗಿನಿಪನ | ಧುರದಿ ಬೆರಸಿಹನನ್ನು |
ತರಿದವನ ಪಿತನ ಸಖಸುತನ ದೊರೆಯ ||
ವರತಾತ ಸುತನ ಸಂ | ಗರದಿ ಗೆಲಿದನ ಧ್ವಜದಿ |
ಮೆರೆವ ದಾಸಶ್ರೇಷ್ಠ ಪೊರೆ ಸಂತತ || ೧ || 4 ||

**ಭೋಗಷಟ್ಪದಿ**
ಗಿರಿಶಪ್ರೀತೆ ದುರುಳ ಘಾತೆ | ಹರುಷದಾತೆ ಲೋಕಮಾತೆ |
ಗೆರಗಿ ಮನದಿ ಧ್ಯಾನಿಸುವೆನು ಯೋಗಿನಿಯರನು ||
ಶರಜಯೋನಿ ಪಾವಮಾನಿ | ಸುರಸಮೂಹ ಬರ್ಹಿವಾಹ |
ತರಣಿಮುಖ್ಯ ಗ್ರಹರ ಪದಕೆ ಮಣಿವೆ ದೈನ್ಯದಿ || ೧ || 5 ||

**ಭಾಮಿನಿ**
ಗುರುವರಂಗೆರಗುವೆನು ವಿನಯದಿ |
ವರದ ವೇದವ್ಯಾಸಮುನಿಪನ |
ಚರಣಕಮಲವ ನುತಿಪೆ ನಾರದ ತುಂಬುರಾದ್ಯರನು ||
ಸ್ಮರಿಸಿ ಶುಕಯೋಗಿಯನು ಮತ್ತಾ |
ವರಮಹಾ ವಾಲ್ಮೀಕಿಯನು ನಾ |
ಭರಿತವಹ ಭಕ್ತಿಯಲಿ ಪ್ರಾರ್ಥಿಪೆನಡಿಯ ಬಲಬಂದು || ೧ || 6 ||

**ವಾರ್ಧಕ**
ಕ್ಷೀರಸಾಗರಸದನ ಚಾರುಸುಸ್ಮಿತವದನ |
ಮಾರಜನಕ ಮುರಾರಿ ಕ್ರೂರವೃಜಿನಕುಠಾರಿ |
ವಾರಿಜೋದ್ಭವತಾತ ವೀರಖಗಪವರೂಥ ಕಾರುಣ್ಯರಸಪೂರಿತ ||
ನಾರದಾದಿಸ್ತೋತ್ರ ವಾರಿರುಹದಲನೇತ್ರ |
ಮಾರಮಣ ಹರಿವೇಷ ನಾರಿವ್ರಜನುತಿತೋಷ |
ವಾರಖಳಸಂಹಾರಿ ಸಂತತಂ ದಯೆದೋರಿ ನೀ ರಕ್ಷಿಸೆನ್ನ ಶೌರಿ || ೧ || 7 ||

**ದ್ವಿಪದಿ**
ವೇದವೇದಾಂಗಪಾರಂಗತರಿಗೆರಗಿ |
ಮಾಧವನ ಭಜಕಶ್ರೇಷ್ಠರಿಗೆ ತಲೆವಾಗಿ || ೧ ||

ವಿಷ್ಣುಪೌರಾಣದೊಳಶೋಕಸುಂದರಿಯ |
ಸೃಷ್ಟಿಪತಿ ನಹುಷ ವರಿಸಿದನೆಂಬ ಪರಿಯ || ೨ ||

ಸಾದರದಿ ಗೈವೆ ಕನ್ನಡ ಪ್ರಬಂಧದಲಿ |
ವಾದಿಸದೆ ಸುಜನರಿದನೋದಿ ಪ್ರಕಟಿಸಲಿ || ೩ || 10 ||

**ಸೌರಾಷ್ಟ್ರ - ತ್ರಿವುಡೆ**
ನೈಮಿಷಾಹ್ವಯ ವಿಪಿನದೊಳಗತಿ |
ರಾಮಣೀಯಕಮಾದ ಮೌನಿ |
ಸ್ತೋಮ ಮಧ್ಯದಿ ಸೂತನೆಸೆದಿರೆ | ಪ್ರೇಮದಿಂದ || ೧ ||

ವಂದಿಸುತ್ತಲಿ ಶೌನಕಾದಿಗ |
ಳೆಂದರಮರೇಶ್ವರನು ದುಃಖಿಸಿ |
ದಂದವೇನ್ ಮಾಹಿಷ್ಮತೀಶನು | ಕಂದನನ್ನು || ೨ ||

ಪಡೆದನೆಂತಾ ದನುಜ ಹುಂಡನು |
ಮಡಿದ ತತ್ಸುತನನ್ನು ಮಾಯೆಯು |
ಜಡಜಸಖಸುತನೆಡೆಗೆ ಕಳುಹಿದ | ಳೊಡನೆ ದಯದಿ || ೩ ||

ಮತ್ತೆ ತಿಳುಹಿಸಶೋಕಸುಂದರಿ |
ಪೃಥ್ವಿಯೊಳಗಿನ್ನಾರ ಸೇರ್ದಳು |
ಬಿತ್ತರಿಪುದೆನೆ ಕೇಳಿ ಸೂತನು | ಸತ್ವರದಲಿ || ೪ ||

ಕಮಲಭವಧರ ಕಮಲಮಾನಸ |
ಕಮಲ ಕಮಲಜಮಿತ್ರನಂ ನಿಜ |
ಕಮಲಸಂಭವ ಕಮಲಜರ ಹೃತ್ | ಕಮಲದಲ್ಲಿ || ೫ ||

ನೆಲೆಗೊಳಿಸುತುಸುರಿದನು ಕಲ್ಮಷ |
ಜಲಧಿಗಿದು ಹರಿಗೋಲು ಲತೆ ತರ |
ಗೆಲೆಯ ಕಿಚ್ಚಿಂಗಿಕ್ಕಿದಂತಹು | ದೊಲಿದು ಕೇಳಿ || ೬ || 16 ||

**ಕಾಂಬೋಧಿ - ಝಂಪೆ**
ಸ್ವರದಿ ಶಕ್ರನು ಸುರರ | ಪರಿವಾರದೊಡನೆ ವಿ |
ಷ್ಟರದಿ ಮಂಡಿಸುತ ಗುರುವರನ ||
ಚರಣಯುಗಕಮಲಗಳಿ | ಗೆರಗುತತಿ ದೈನ್ಯದಿಂ |
ದೊರೆದನೀ ಸ್ವರ್ಗಭೋಗಗಳ || ೧ ||

ಅನುಭವಿಸುವೆನು ಎಂದು | ದನುಜರತಿ ಜಠರಾಗ್ನಿ |
ಯನು ತಡೆಯದಿಲ್ಲಿಗೈತಂದು ||
ಘನಪರಾಕ್ರಮದಿ ಮ | ನ್ಮನ ಮರುಗಿಸುವುದನ್ನು |
ನೆನಸಲೀ ಸೌಖ್ಯವೆನಗಧಿಕ || ೨ ||

ಆದರಾ ಸ್ಕಂದ ಗಂ | ಗಾಧರ ರಮೇಶರು ವಿ |
ರೋಧಿಗಳ ತರಿದನುಗ್ರಹಿಸಿ ||
ಮೋದ ತೋರಿದರೀಗ | ಳಾ ದನುಜ ಕಾಳಾವ |
ತೀಧೀಶ ಹುಂಡನೆಂಬುವನು || ೩ ||

ಬಲುಪರಾಕ್ರಮಿಯಾಗು | ತಿಳೆಯಮರರಂ ಮೌನಿ |
ಗಳನು ಪೀಡಿಸುತಿರುವನೆಮಗೆ ||
ಸಲುವ ಭಾಗವ ಯಜ್ಞ | ದಲಿ ಬಿಡದೆ ತಿನ್ನುತಿಹ |
ಖಳನುಪದ್ರವ ಸಹಿಸಲೆಂತು || ೪ || 20 ||

**ಕಂದಪದ್ಯ**
ಅಂತು ಬಿಡೌಜನು ಪೇಳಲ್ |
ಚಿಂತಿಸುತವಲಂಬಿಸುತ್ತ ಯುಕ್ತಿಯನಾಗಳ್ ||
ಸಂತೈಸುತ ಗೀಷ್ಪತಿ ಧೀ |
ಮಂತನೆ ಬಿಡು ದುಗುಡ ಕೇಳು ಪೇಳುವೆನೀಗಳ್ || ೧ || 21 ||

**ಸುರುಟಿ - ಏಕ**
ಸರಸಮಪ್ಪುದಿನ್ನು | ಕಾರ್ಯವು |
ಸರಸಮಪ್ಪುದಿನ್ನು ||
ಸರಸಮಾಗೆ ಸಿರಿ | ತರುಣಿಯೊಲಿವ ಪರಿ |
ವಿರಚಿಪುದೀಗಲು | ಕೊರತೆಯ ಕಳೆಯಲು || ೧ ||

ನಂಬಿದ ಭಕ್ತರ | ನುಂ ಬಿಡದುರುತರ |
ಕಂಬದಿ ಬಂದನ | ನಂಬಲು ಮುಂದಣ || ೨ ||

ತೆರಳುತ ವಹಿಲದಿ | ಶರಧಿಯ ತೀರದಿ |
ಹರಿಧರಗೊರೆಯುವ | ಸ್ಮರಿಸುವ ಮಘವ || ೩ || 24 ||

**ಭಾಮಿನಿ**
ಗುರುವಿನಪ್ಪಣೆಯನ್ನು ಶಿರದೊಳು |
ಧರಿಸಿ ನಿರ್ಜರರೊಡೆಯನಾಕ್ಷಣ |
ಸರಿಯಿದೆಂದುಸುರುತ್ತ ದಿಕ್ಪಾಲಾದ್ಯರನು ನೆರಹಿ ||
ಪೊರಟನಮರವ್ಯೂಹದೊಡನೈ |
ತರುತ ಕ್ಷೀರೋದಧಿಯ ಕೂಲದೊ |
ಳಿರುವ ಸೈಕತದಲ್ಲಿ ಕರಪುಟ ಪೊತ್ತು ನುತಿಸಿದನು || ೧ || 25 ||

**ಭೈರವಿ - ಝಂಪೆ**
ನೀಲನೀರದ ಗಾತ್ರ | ಕಾಲಕಾಲನಮಿತ್ರ |
ಪಾಲುಗಡಲ ನಿವಾಸ | ಬಾಲಾರ್ಕಭಾಸ ||
ಜಯತು ಜಯ ಜಯತು || ೧ ||

ವ್ಯಾಳತಲ್ಪಕ ತುಳಸಿ | ಮಾಲ ಕೌಸ್ತುಭಭೂಷ |
ಖೂಳ ರಾಕ್ಷಸನಾಶ | ಶೀಲ ಸುವಿಲಾಸ ||
ಜಯತು ಜಯ ಜಯತು || ೨ ||

ಶೋಕದಿಂ ಬಳಲುತಿಹ | ನಾಕಿಗರನುಂ ಸಲಹ |
ಬೇಕಿಷ್ಟದಾಯಕನೆ | ಲೋಕಶಾಂತಕನೆ ||
ಜಯತು ಜಯ ಜಯತು || ೩ || 28 ||

**ಸೌರಾಷ್ಟ್ರ - ತ್ರಿವುಡೆ**
ಇಂತು ನುತಿಸಲ್ಕಾಗ ಹರಿಯು ಶ |
ಕುಂತಪತಿಯನ್ನೇರಿ ತನ್ನಯ |
ಕಾಂತೆಯರನೊಡಗೂಡಿ ಬಂದನು | ಸಂತಸದಲಿ || ೧ ||

ಮುಗುಳುನಗೆಯಿಂದುಸುರಿದನು ಕೇಳ್ |
ಮಘವ ನೀನೀತೆರದಿ ದುಃಖಿಪ |
ಬಗೆಯ ಪೇಳೆಂಬನಿತರೊಳು ಪದ | ಯುಗಳಕೆರಗಿ || ೨ ||

ದೇವಪತಿ ನುತಿಸುತಲಿ ಮತ್ತಾ |
ದೇವದೇವನೊಳೆಂದ ನಮಗಿ |
ನ್ನಾವ ಪರಿಯೆಂದೆಣಿಸೆ ದೈತ್ಯನ | ಹಾವಳಿಯನು || ೩ ||

ತಾಳಲಾರೆನು ಜೀಯ ನೀ ಕರು |
ಣಾಳುತನದಿಂದೀಗಲೆಮ್ಮನು |
ಗೋಳುಗುಡಿಸುವ ಖಳನ ಕೊಲ್ಲಿಸಿ | ಪಾಲಿಸೆಂದ || ೪ ||

ರಕ್ಕಸಾಂತಕನೆಂದ ನಿಮ್ಮಯ |
ಕಕ್ಕುಲತೆ ಬಿಡಿರಸುರನಂ ಕೊಲ |
ಲಿಕ್ಕುಪಾಯವ ರಚಿಪೆ ಸರ್ವರ | ದುಃಖ ಹರಿಸೆ || ೫ || 33 ||

**ಕಂದ ಪದ್ಯ**
ಶಾಂತತೆಯಿಂದಿರಲೆಲ್ಲರ್ |
ಸಂತಸ ಮುಂದಕ್ಕು ಪೋಗಿರೆಂದುಸುರುತ್ತಂ ||
ತಾಂ ತೆರಳಲು ಜಿಷ್ಣುವು ಸುರ |
ಸಂತತಿ ಸಹಿತೈದಿ ನಾಕದೊಳಗಿರುತಿರ್ದಂ || ೧ || 34 ||

**ಭಾಮಿನಿ**
ಒಂದು ದಿನ ಮಾಹೀಷ್ಮತೀನಗ |
ರೇಂದ್ರನಾದಾಯುರ ನೃಪಾಲನು |
ವಂದಿಮಾಗಧಸಚಿವ ಗಾನಾಭಿಜ್ಞಕವಿಜನರ ||
ಪೊಂದುತಲಿ ವಿದ್ವಾಂಸ ಭಟ್ಟರ |
ಸಂದಣಿಯೊಳಿರೆ ಹಾಸಕುಶಲಿಗ |
ರಿಂದ ಪೌರಾಣಿಕ ಪುರೋಹಿತರೊಡನೆ ಮಂಡಿಸಿದ || ೧ || 35 ||

**ಮಧ್ಯಮಾವತಿ - ತ್ರಿವುಡೆ**
ಕರೆದು ಸಚಿವ ಸುಶೀಲನನು ತಾ |
ನೊರೆದನೀ ರೀತಿಯೊಳು ಭೂಪನು |
ಭರಿತಸಂಪದಮಿರ್ದು ಫಲಮೇಂ |
ಮರೆಯಲಸದಳ ದುಗುಡವ | ಯೇನನೆಂಬೆ || ೧ ||

ತರಳರಿಲ್ಲದ ಎನ್ನ ಭವನವ |
ಪರಿಕಿಸಿದರಕಟಾ ತಮಿಸ್ರಾ |
ಕರನಿರದ ನಿಶಿಯಂತೆ ಭಾಸ್ಕರ |
ನಿರದ ಪುಷ್ಕರದಂದದಿ | ತೋರುತಿಹುದು || ೨ ||

ಎಷ್ಟು ವಿಧದಿಂ ಸೈರಿಸಲು ಮ |
ತ್ತಷ್ಟು ವೃದ್ಧಿಯನೈದುವುದು ವಿಧಿ |
ಸೃಷ್ಟಿಯೊಳಗೆನ್ನಂತೆ ಪಾಪಿಗ |
ಳೆಷ್ಟು ಶೋಧಿಸೆ ಸಿಗುವರೆ | ಅನಯವಹುದು || ೩ ||

ಧರಣಿಪತಿಯೆಂದೆನಿಸುತುತ್ತಮ |
ಪರಗತಿಯ ಸಾಧಿಸಲು ಸುತನೆನ |
ಗಿರದಧೋಗತಿಯಪ್ಪುದಲ್ಲದೆ |
ಸರುವರಿಹದೊಳು ನಿಂದಿಸಿ | ಬಿಡುವರಕಟ || ೪ ||

ಇನಿತು ಪೇಳೆ ಸುಶೀಲನೆಂದನು |
ಮನದಿ ವ್ಯಥಿಸಿದರೇನು ಫಲವಿಹು |
ದನವರತ ಸುಖದುಃಖ ಸಮವಿರ |
ಲಿನಿತಿರುವುದೆಂಬುವುದನು | ಪೇಳಲಹುದೆ || ೫ || 40 ||

**ಶರಷಟ್ಪದಿ**
ಮಂತ್ರೀಂದ್ರನು ತಾ | ನೆಂತೆಂದರು ಭೂ |
ಕಾಂತಗೆ ಶಾಂತತೆ ಪೊಂದುವುದೇಂ ||
ಚಿಂತಾಶರಧಿಯ | ನಾಂತಿರೆ ಧೌಮ್ಯರ |
ನಂತಶಿಷ್ಯರೊಂದಿಗೆ ಬರಲು || ೧ || 41 ||

**ಸಾಂಗತ್ಯ - ರೂಪಕ**
ಭೂಮಿಪಾಲಕನಾಗ | ಧೌಮ್ಯರ ಕರೆತಂದು |
ಪ್ರೇಮದೊಳಾಸನ ಕೊಡುತ ||
ಗೋ ಮಹಿ ಕಾಂಚನ ಗೋಮೇದಿಕಗಳನಿ |
ತ್ತಾ ಮೌನಿಗೆರಗಲಿಂತೆಂದ || ೧ ||

ಜನಪ ನೀ ಚಿಂತೆಯ | ನನುಕರಿಸಿರುವುದ |
ನೆನೆಸುತ್ತ ಬಂದೆ ನಾನಿಂದು ||
ಮನದ ದುಃಖವನು ಬಿ | ಟ್ಟನುಮಾನಗೊಳ್ಳದೆ |
ಘನರೀತಿಯಿಂದ ಕೇಳಿದನು || ೨ ||

ಮುನಿಪ ದತ್ತಾತ್ರೇಯ | ನನು ಸೇವಿಸಲು ಚಿತ್ತ |
ದನುವ ಕೈಗೊಳಿಪನಾ ಮಹಿಮ ||
ವನಧಿವಾಸನು ಬಂದ | ವನಿಯೊಳು ಬದರಿಕಾ |
ನನಕೈದಿರುವನರ್ಚಿಸವನ || ೩ || 44 ||

**ಭಾಮಿನಿ**
ಎಲೆ ಮುನಿಗಳಿರ ಕೇಳಿ ಧೌಮ್ಯರು |
ಇಳೆಯಧಿಪಗಿಂತುಸುರಿ ತಮ್ಮಾಯ |
ನಿಲಯಕೈದಿದರಾಗ ಶಿಷ್ಯರ ಸಹಿತ ವಹಿಲದಲಿ ||
ಬಳಿಕಲಾಯುರ್ಭೂಪ ಬದರೀ |
ವಲಯಕೈದುತ್ತಲ್ಲಿ ತೋರುವ |
ಲಲಿತಕಲೆಗಳ ನೋಡುತಚ್ಚರಿಯಿಂದಲಿಂತೆಂದ || ೧ || 45 ||

**ದ್ವಿಪದಿ**
ಎಡಬಲದ ಪಕ್ಕದಲಿ ಕಣ್ಗೆ ರಂಜಿಪುದು |
ಗಿಡ ವೃಕ್ಷ ಗುಲ್ಮ ಕುಶನಿವಹ ತುಂಬಿಹುದು || ೧ ||

ತುಳಸಿ ಬಿಲ್ವಾಶ್ವತ್ಥ ವಟಶಮಿಗಳಿಂದ |
ತಳಿರು ಪತ್ರಗಳಿಳಿದು ಗಂಧವಹನಿಂದ || ೨ ||

ಚಲಿಪುದಲ್ಲದೆ ಗಗನದಿಂದಲಾತಪವು |
ಇಳೆಗುರುಳದಂತೆಲೆಯ ಮೊತ್ತ ಕವಿದಿಹುದು || ೩ ||

ಚಿತ್ರಕಾನಂದವಹ ಸ್ವಾದು ಕಂಚಿಗಳು |
ಕಿತ್ತಳೆ ಕದಂಬ ಪನಸೇಕ್ಷು ಚೂತಗಳು || ೪ ||

ಜಂಬು ಮಾತುಲ ತಾಲ ನಾರಂಗ ಪೂಗ |
ಲಿಂಬೆ ದಾಡಿಮ ದ್ರಾಕ್ಷಿ ಕದಳಿಗಳೊಳೀಗ || ೫ ||

ಭರಿತವಹ ಫಲಪಕ್ವ ಕೊನೆಗಳೀಕ್ಷಿಸಲು |
ಕರಿಯ ಸೊಂಡಿಲಿನಂತೆ ಭಾಸವಾಗಿರಲು || ೬ ||

ಇದರಿಂದ ಕೂಡಿರುವ ತನಿವೆಲರು ಬಂದು |
ಮುದದಿ ಸುಳಿದಾಡೆ ಕ್ಷುತ್ತೃಷೆಗಳಡಗುವುದು || ೭ ||

ಈ ಕಡೆಯ ನೋಡಿದರೆ ವ್ಯಾಘ್ರಗೋನಿಕರ |
ಭೇಕ ಫಣಿ ಗಂಡಭೇರುಂಡ ಗಜವಿಸರ || ೮ ||

ಏಕತ್ವದಿಂದ ನಲಿದೋಡಾಡುತಿಹವು |
ಲೋಕೇಶನಿಲ್ಲಿ ನೆಲೆಗೊಂಡಿಹುದು ದಿಟವು || ೯ ||

ಇಂತುಸುರುತ್ತೈದೆ ಗೊಂಡಾರಣ್ಯದೊಳಗೆ |
ಅಂತರದಿ ಶಶಿಕಾಂತಿ ಕಂಗೊಳಿಸಿತವಗೆ || ೧೦ ||

ಯೋಗನಿದ್ರೆಯೊಳೆಸೆಯುವತ್ರಿಪುತ್ರನನು |
ಪೋಗುತಿರೆ ಪರ್ಣಮಂದಿರದಿ ನೋಡಿದನು || ೧೧ ||

ಅಜಿನವಿಷ್ಟರ ಗೈದು ವಲ್ಕಲಾಂಬರದಿ |
ದ್ವಿಜಪಕಾಂತಿಯೊಳೆಸೆಯೆ ನುತಿಸಿದನು ನಯದಿ || ೧೨ || 57 ||

**ಶ್ಯಾಮಲಾದಂಡಕ**

ಜಯ ಜನಕವಿಪಿನಾಂತರಸ್ಥಿತಂ, ಜಯ ದೇವಸಮೂಹಾರ್ಚಿತಂ, ಮುನಿಕದಂಬಸುಜ್ಞಾನದಂ, ಜನವಿಸರವಾಂಛಾರ್ಥದಂ, ದಿವಾಕರನಿಶಾಕರವೈಶ್ವಾನರಶತಸಾಹಸ್ರತೇಜೋರ್ಣವಂ,ಭವಾರ್ಣವಪ್ಲವಂ, ಕಶ್ಯಪಾದಿಋಷಿಗಣ ಸೇವ್ಯಮಾನದ್ವಯ ಚರಣಾರವಿಂದಾದ್ವಯಂ, ಉತ್ತಮಾಂಗತ್ರಯಂ, ಜಟಾಮಕುಟವಲ್ಕಲಾಂಬರಾಕ್ಷಸೂತ್ರ ಸ್ಫಟಿಕವನಮಾಲಾವೇಷ್ಟಿತಂ, ಸುಜ್ಞಾನಾವೇಷ್ಟಿತಂ, ಕರಕರಣದೃಗುಯುಗಲತ್ರಯಂ, ಅಹಿರುದ್ರಾಕ್ಷಮಕರಕುಂಡಲಧಾರಿಣಂ, ಲೋಕಹಿತಕಾರಿಣಂ, ಶೂಲಡಮರು ಶಂಖಚಕ್ರ ಕಮಂಡಲ್ವಕ್ಷಮಾಲಾಧರಂ, ಜಗದುದ್ಧಾರಂ, ವೇದವೇದಾಂಗಸಂಸ್ತುತ್ಯಂ, ಆದ್ಯಂತರಹಿತಂ, ಜಂಗಮಸ್ಥಾವರಪ್ರಾಣಿಹಿತೋದ್ಯತಂ, ಸದಾನಂದಚರಿತಂ , ಭಸ್ಮಗೋಪೀಚಂದನ ಗಂಧಕಸ್ತೂರೀತಿಲಕ ವಿಲೇಪನಾಲಂಕೃತಾಂಗಂ, ತಪೋಂತರಂಗಂ, ಅತ್ರಿಮುನಿತನುಜಂ, ದತ್ತಾತ್ರೇಯಾಹ್ವಯಂ, ಕೃತ್ತಿವಾಸವಿರಿಂಚಿಶತಪತ್ರಪಿಚಂಡಸ್ವರೂಪಂ, ಪ್ರಣವಸ್ವರೂಪಂ, ಪ್ರಪಂಚಚಕ್ರಕುಲಾಲಂ, ಜಗನ್ನಾಟಕಸೂತ್ರಧಾರಂ, ನಿರ್ಗುಣಾತ್ಮಕಂ, ನಿರಂಜನಂ, ನಿಷ್ಕಳಂಕಂ, ಜಲಪೂರಿತಘಟಸಾಹಸ್ರಭಾಸಮಾನಮಿವ ಭಾಸಿತಂ, ಲೋಕೈಕನಾಥಂ, ಜನ್ಮಜನ್ಮಾಂತರಕೃತ ವೃಜಿನವ್ರಜವಿನಾಶನಂ, ಐಹಿಕಾಮುಷ್ಮಿಕ ಸುಖಸದ್ಗತಿದಾಯಕಂ, ಭಜಕಜನಾಹ್ಲಾದಕಂ,ಸಕಲವೇದಾತ್ಮಕಂ, ಸಕಲಮಂತ್ರಾತ್ಮಕಂ, ಸಕಲತತ್ತ್ವಾತ್ಮಕಂ, ಸಕಲದೇವಾತ್ಮಕಂ, ಸಕಲಭೂತಾತ್ಮಕಂ, ಸಕಲಭುವನಾತ್ಮಕಂ, ಭವವಿದೂರಕಂ, ದುಃಖನಿವಾರಕಂ, ಶರಣೋದ್ಧಾರಕಂ, ದತ್ತಾತ್ರೇಯಂ ತ್ವಾಂ ಭಜೇಹಂ ಪಾಹಿ ಮಾಂ ಪಾಹಿ ಮಾಂ ಪಾಹಿ ಮಾಂ ಪಾಹಿ ||

**ಬೇಗಡೆ - ಅಷ್ಟ**

ಆಯುರಾಖ್ಯನೃಪಾಲನರ್ಚಿಸುತ | ನಮಿಸಲ್ಕೆ ದತ್ತಾ |
ತ್ರೇಯ ನೋಡುತ್ತೆಂದ ನಸುನಗುತ ||
ರಾಯನಂದದಿ ತೋರ್ಪೆ ನೀನಾ |
ರೈಯಡವಿಗೈದೀರ್ಪೆ ತ್ವದಭಿ |
ಪ್ರಾಯವಾವುದು ಕೇಳು ವಾಂಛಿತ |
ವೀಯುವೆನು ಎನಲಾಗಲುಸುರಿದ || ೧ ||

ಇಂದುವಂಶದಿ ಪುಟ್ಟಿ ರಾಜ್ಯವನು | ಪಾಲಿಸುವೆನಾಯುರ |
ನೆಂದು ಪೇಳುವರಿನ್ನು ಬೆಸಸುವೆನು ||
ಕಂದರಿಲ್ಲದೆ ಮನದಿ ಬಹುಪರಿ |
ನೊಂದು ವಂಶಚ್ಛೇದವೆನ್ನಿಂ |
ದಿಂದಿಗಾದಪುದೆನುತ ಮರುಗಲು |
ಬಂದು ಕಳುಹಿದ ಧೌಮ್ಯನೆನ್ನನು || ೨ ||

ಬರಲು ಕಂಡೆನು ತ್ವತ್ಪದಾಂಬುಜವ | ಪಿಂದಣದ ಸುಕೃತದಿ |
ಚರಣಸೇವೆಯ ಗೈದೆ ಮುಂದಿರವ ||
ಪರಿಕಿಸೆನು ಚಿನ್ಮಯ ತಪೋನಿಧಿ |
ಕರುಣದಿಂ ಪಾಲಿಸುತಲುತ್ತಮ |
ಪರಗತಿಯು ವಂಶಕ್ಕೆ ಮಣಿಯಂ |
ತಿರುವ ಸುತನಂ ಕೊಡು ದಯಾನಿಧೇ || ೩ ||

ಘಳಿಲನೀಕ್ಷಿಸುತಾಗಲಂಬರವ | ಕರವೆತ್ತಲಾಕ್ಷಣ |
ಫಲವು ದೊರೆಯಲ್ಕಾಗ ಮುನಿದೇವ ||
ಒಲಿದು ಸಂತತಿಮಂತ್ರ ಜಪಿಸು |
ತ್ರಿಳೆಯಧಿಪಗಿತ್ತೆಂದ ನಿನ್ನಯ |
ಲಲನೆ ಭುಜಿಸಲು ಪುತ್ರ ಜನಿಸುವ |
ನಳಲದಿರು ಶುಭಮಕ್ಕುಮಂತ್ಯಕೆ || ೪ ||

ಸತತ ಜನಸೇವೆಯಲಿ ರಾಜ್ಯವನು | ಧರ್ಮದಲಿ ಪಾಲಿಸು |
ಜತನದಿಂದಲಿ ಪೋಗು ನೀನಿನ್ನು ||
ಶತಮಖಾದ್ಯರ ಸಖ್ಯದಿಂ ತವ |
ಸುತನು ಪ್ರಖ್ಯಾತಿಯನು ಹೊಂದುವ |
ನತಿಹಿತದಿ ತೆರಳೆಂದು ಪೇಳಲು |
ಕ್ಷಿತಿಪ ದುಃಖಿಸುತೆಂದ ಬಿಡದೆಯೆ || ೫ || 62 ||

**ವಾರ್ಧಕ**
ಚರಣಯುಗ ಪಿಡಿಯುತಂ ಪರಿಪರಿಯೊಳ್ ಪೊಗಳುತಂ |
ಶರನಯನದಿಂದ ತತ್ತರಿಪ ರವದಿಂದ ಹಿತ |
ಕರಮಾಗದಿಲ್ಲಿಂದ ಪೊರಡಲೆನ್ನಿಷ್ಟದಲ್ಲುರು ಕಷ್ಟಮಪ್ಪುದೆಂದ ||
ನರಜನ್ಮದಿಂ ಪುಟ್ಟಿ ನರಕಪಥಮಂ ದಿಟ್ಟಿ |
ಸಿರದೆ ತ್ವತ್ಸಂಗಸುಖ ದೊರೆತಿರಲು ಜಗದಧಿಕ |
ಪರದೈವ ನಿನ್ನನಗಲಿರಲೆಂತು ಸಂತಸಗಳೊರೆಯಲಾರೆನು ದೇವನೆ || ೧ || 63 ||

**ಭಾಮಿನಿ**
ದತ್ತಮೌನಿಪನೆಂದ ನೃಪನೊಳು |
ಚಿತ್ತಚಾಂಚಲ್ಯವನು ತ್ಯಜಿಸು |
ತ್ತರ್ಥಿಯಿಂದರಮನೆಯೊಳಿರು ನೀನೆನ್ನ ಭಜಿಸುತಲಿ ||
ಮಿಥ್ಯವಲ್ಲಲ್ಲಿರುವೆನೆಂದ |
ತ್ಯುತ್ತಮೋಕ್ತಿಯನೊರೆದು ಕಳುಹಲು |
ಪೃಥ್ವಿಪತಿ ಪಟ್ಟಣಕೆ ಬಂದರಸಿಯೊಳು ಬೆಸಸಿದನು || ೧ || 64 ||

**ನೀಲಾಂಬರಿ - ಅಷ್ಟ**
ಲಲನೆ ಕೇಳೆಲೆ ನಮ್ಮ | ಕುಲವೃಕ್ಷ ಫಲಿಸಲು |
ಫಲವನಿತ್ತಿಹ ಮೌನಿ | ತಿಲಕ ಸರ್ವೇಶ || ೧ ||

ಎಂದು ಧ್ಯಾನಿಸಿ ಹಣ್ಣ | ನಿಂದುಮತಿಗೆ ಕೊಟ್ಟು |
ಚಂದದಿ ಭುಜಿಸು ನೀ | ನೆಂದು ನೇಮಿಸಿದ || ೨ ||

ತರುಣಿ ಕಾಂತನ ದಿವ್ಯ | ಚರಣಕ್ಕೆ ನಮಿಸುತ |
ಭರಿತ ಭಕ್ತಿಯಲಿ ಸ್ತ್ವೀ | ಕರಿಸಿದಳಂದು || ೩ || 67 ||

**ವಾರ್ಧಕ**
ಋಷಿಗಳಿರ ಕೇಳಿರಾ ಶಶಿಮತಿಯು ಗರ್ಭವಾಂ |
ತೆಸೆಯಲರಿತಾಗಲಾಯುಭೂಪ ಸೀಮಂತ |
ವೆಸಗಿ ಭೂಸುರರಿಂಗೆ ವಸನಕನಕಗಳನಿತ್ತುಸಮತೋಷದೊಳಿದ್ದನು ||
ವಸುಮತಿಯ ಜನರೆಲ್ಲ ಕುಶಲಗೊಂಡಿರಲು ಬಳಿ |
ಕ ಸುಲಗ್ನದಲಿ ಜನಿಸಲುಸುರಲೇಂ ಸುತಗೆ ದ್ವಾ |
ದಶ ದಿನದಿ ಪೆಸರನ್ನು ನಹುಷನೆಂದಿಡುತಂದು ಶಿಶುವ ತೊಟ್ಟಿಲೊಳಿಟ್ಟರು || ೧ || 68 ||

**ಜೋಗುಳ**
ಜೋ ಜೋ ಜೋ ಜೋ ಜೋ ಸುಕುಮಾರ |
ಜೋ ಜೋ ಜೋ ಜೋ ಬಣ್ಣ ಬಂಗಾರ || ಜೋ ಜೋ || ಪ ||
ಚಂದ್ರವಂಶಾಂಬುಧಿ ಚಂದ್ರಮಾ ಜೋ ಜೋ |
ಇಂದುಮತಿಯ ಮನದಂದವೆ ಜೋ ಜೋ ||
ಕಂದರ್ಪಲಾವಣ್ಯದಿಂದ ರಾಜಿಸುವ |
ಕಂದನೆ ನಿನ್ನ ಗೋವಿಂದ ರಕ್ಷಿಸುವ || ೧ ||

ಮಲಮೂತ್ರ ಕೊಳೆಗಳ ಪನ್ನೀರನೆರೆದು |
ತೊಳೆದು ಬೆಳಗುವಂತಂಬರ ಶುಚಿಗೈದು ||
ಮಲಗಿಸಿ ಪರಿಮಳ ಗಂಧ ಧೂಪಗಳು |
ಬೆಳಕು ಗಾಳಿಗಳಿಕ್ಕಾರೋಗ್ಯಕ್ಕೆ ಕೇಳು || ೨ ||

ಚಿನ್ನದ ಸರಪಳಿಯನ್ನು ಪಿಡಿಯುತ್ತ |
ರನ್ನದ ತೊಟ್ಟಿಲ ಮೆಲ್ಲ ತೂಗುತ್ತ ||
ಚಿಣ್ಣನ ನಿದ್ರೆಗೈಸುತ್ತಲೆಲ್ಲವರು |
ಮಿಣ್ಣನೆ ನಿಃಶಬ್ದದಿಂ ಮಲಗಿದರು || ೩ || 71 ||

**ಕಾಂಬೋಧಿ - ಝಂಪೆ**
ಅತ್ತ ಕಾಳವತೀ | ಪತ್ತನಾಧಿಪ ಹುಂಡ |
ರಾತ್ರಿಚರನೊಂದು ದಿವಸದಲಿ ||
ಮಿತ್ರನಸ್ತಮಯದಲಿ | ಕೃತ್ತಿವಾಸನ ನೆನೆದು |
ವೃತ್ರಾರಿಯನು ನಿಂದಿಸುತಲಿ || ೧ ||

ಕ್ರೂರರವ ವಜ್ರರದ | ಘೋರಾಸ್ಯ ವಿಪ್ರಾರಿ |
ಚೋರಪತಿ ದೀರ್ಘನಾಸಿಕನು ||
ಶೂರ ಮಾಯಾಧೀಶ | ಭೂರಿಬಲ ದುರ್ಮತಿಯ |
ವಾರದೊಡನೋಲಗವನಿತ್ತ || ೨ ||

ಪರಿಪರಿಯ ವೆಗ್ಗಳವ | ನೊರೆದೆನ್ನ ಸರಿಯಾರು |
ದೊರೆ ಧರೆಯೊಳಿಹರೆಂಬ ಸಮಯ ||
ಹರನನ್ನು ಪೊಗಳುತಂ | ಬರದಿಂದ ವೀಣೆಯಂ |
ಸ್ವರಗೈದು ನಾರದನು ಬರಲು || ೩ || 74 ||

**ಕೇದಾರಗೌಳ - ಅಷ್ಟ**
ದನುಜೇಶನೀಕ್ಷಿಸಿ ಕನಕಪೀಠವನಿತ್ತು |
ಮುನಿಯನೇರಿಸಿ ವಂದಿಸಿ ||
ಘನ ಭಕುತಿಗಳೊಳರ್ಚನೆ ಗೈದು ಪೇಳಿದ |
ನನುಮಾನದಿಂದಲಾಗ || ೧ ||

ಸುರಲೋಕಾದಿಗಳನ್ನು ಚರಿಸುವಿರಿಲ್ಲಿಗೈ |
ತರಲು ಕಾರ್ಯಗಳೇನದು ||
ಬರಿದೆ ನಿಮ್ಮಯ ದಿವ್ಯ ದರುಶನವಾಗದು |
ಕರುಣದಿ ತಿಳುಹಿರಿನ್ನು || ೨ ||

ಅರುಹಲಂಜುವೆ ಸುಮ್ಮನಿರುವರೆನ್ನಲ್ಲದ |
ನಿರಿಸುವಡರಿಯೆ ಕೇಳು ||
ಭರಿತತೋಷದೊಳಿರ್ಪೆ ಪರಿಕಿಸದಿನಿತು ನೀ |
ಹರಣವನರ್ಪಿಸುವಿ || ೩ ||

ದಿತಿಜನ ಧೈರ್ಯದಿ ಕಥಿಸಿರೇನೆನಲೆಂದ |
ಸತತ ಚಾಡಿಗನೆಂಬರು ||
ಕ್ಷಿತಿಯೊಳು ಮಾಹೀಷ್ಮತೀಯ ಪಟ್ಟಣದೊಳು |
ಸುತನೋರ್ವ ಜನಿಸಿಹನು || ೪ ||

ಇಂದು ಬೆಳೆಯುವನು ಮುಂದೆ ಯುದ್ಧದಿ ನಿನ್ನ |
ಕೊಂದು ಪೋಗುವನಿಂತಿರೆ ||
ಬಂದು ಪೇಳದೆ ನಾನು ಚೆಂದದೊಳಿಹುದೆಂತು |
ಹೊಂದು ನಿನ್ನಯ ಮಾರ್ಗವ || ೫ || 79 ||

**ಸೌರಾಷ್ಟ್ರ - ತ್ರಿವುಡೆ**
ಮುನಿಪ ಸೂಚಿಸಿ ತೆರಳೆ ಬಳಿಕಾ |
ದನುಜಪತಿ ಹುಂಡಾಖ್ಯ ತನ್ನಯ |
ಮನದಿ ದುಗುಡವನಾಂತು ಕಂಪನೊ | ಳಿನಿತುಸುರ್ದ || ೧ ||

ಧೀರಸಚಿವನೆ ಮುಂದೆ ಬರುತಿಹ |
ಘೋರಮೃತ್ಯುವ ಜಯಿಸೆ ಯತ್ನವ |
ಸೇರಿಸುತ ಸತ್ವರದೊಳದ ನೀ | ತೋರಿಸೆನಲು || ೨ ||

ಬರಿದೆ ದುಗುಡವಿದೇಕೆ ಪೇಳೀ |
ವರೆಗೆ ಹರಿಹರ ಹರಿಜ ಹರಿಗಳ |
ಧುರದೊಳೋಡಿಸುತಿಪ್ಪ ಶೌರ್ಯಗ | ಳಿರಲು ಹೀಗೆ || ೩ ||

ಧರಣಿಪತಿಯಾಯುರನ ಸುತನಿಂ |
ಮರಣವೆಂತಾಗುವುದು ಬಿಡುಬಿಡು |
ಸುರಮುನಿಪನೊರೆದುದಕೆ ಮಾಯದಿ ತರುತ ಶಿಶುವ || ೪ ||

ಕಡಿದು ತುಂಡುಗಳನ್ನು ಪಾಕವ |
ಬಿಡದೆ ಪರುಠವಿಸುತ್ತ ಮಿತ್ರರ |
ಒಡನೆ ಕುಳಿತದ ಭುಜಿಸುವದರಿಂ | ಕೆಡುವುದೇನು || ೫ || 84 ||

**ಕಂದ ಪದ್ಯ**
ಕಂಪನು ಕೂಡಿದ ದುರುಳರ |
ಗುಂಪಿನೊಳಿಂತುಸುರೆ ಕೇಳುತ ಖಳನಾಗಳ್ ||
ತಾಂ ಪೊರಡಲು ಮಾಯಾಧಿಪ |
ನುಂ ಪೇಳಿದನಾಗ ಶೌರ್ಯದಿಂದೀ ಪರಿಯಂ || ೧ || 85 ||

**ಕೇದಾರಗೌಳ - ಝಂಪೆ**
ತಡಿತಡಿರಿ ನೀವು ಪೋಪ | ಕಾರ್ಯವ |
ಲ್ಲಡಿಗಡಿಗೆ ಮೀರಿ ಕೋಪ ||
ಎಡೆಬಿಡದೆ  ತುಂಬುತಿಹುದು |  ಅಪ್ಪಣೆಯ |
ಕೊಡಲಡರುವೆನು ಕೇಳ್ವುದು|| ೧ ||

ಸದ್ದಿಲ್ಲದಂತೆ ತೆರಳಿ | ತರಳನಂ |
ಕದ್ದು ಶೀರ್ಷದೊಳು ತಾಳಿ ||
ಅಧ್ವವಂ ಪಿಡಿದಿತ್ತಲು | ಬರುವೆನೆಂ |
ದಿದ್ದುದಂ  ಖಳಪನೆನಲು || ೨ ||

ಕರೆದಾಗ ಚೋರಪತಿಗೆ | ವೀಳ್ಯವಿ |
ತ್ತೊರೆದ ನೀಂ ತ್ವರಿತದೊಳಗೆ ||
ತರಳನಂ ತರುವುದೆನುತ | ಮಾಯಾವಿ |
ತೆರಳು ಬೆಂಬಲಕೆಂದ ತಾ || ೩ ||

ಪೊರಟರಾಕ್ಷಣಕೀರ್ವರು | ನಿಶಿಯೊಳಾ |
ಪುರಕೆ ಬಂದೊಳಪೊಕ್ಕರು ||
ಪರರರಿಯದಂತೆತ್ತುತ | ಶಿಶುವನ್ನು |
ಮರಳಿದರು ಮನ ಹಿಗ್ಗುತ || ೪ || 89 ||

**ಭಾಮಿನಿ**
ತಂದು ಶಿಶುವನ್ನೀಯೆ ಹುಂಡನು |
ಕಂದನಂ ಸತಿ ವಿದ್ಯುತೆಯೊಳಿ |
ತ್ತಂದು ಪಾಕವ ರಚಿಪುದೆನಲೈದುತ್ತ ಶಿಬಿರದೊಳು ||
ಮಂದಮತಿ ಕುಂಟಣಿಯ ಕರೆಯು |
ತ್ತೆಂದಳರ್ಭಕನನ್ನು ನೀಡುತ |
ಕಂಧರವ ಕಡಿದೀಗ ಪಾಕವ ರಚಿಸಿ ನೀಡೆನಲು || ೧ || 90 ||

**ಸಾಂಗತ್ಯ - ರೂಪಕ**
ಎರಗಿ ಪಾದಕೆ ಬೇಗ ಪೊರಟಳಾ ಮುದುಕಿಯು |
ಸೆರಗಿನೊಳಿಟ್ಟು ಬಾಲನನು ||
ಪರಿಕಿಸುತಮಿತ ಭಾಸ್ಕರನಂತೆ ಮಿನುಗುವ |
ತರಳನ ನೋಡಿ ಮೋಹದಲಿ || ೧ ||

ಹಸುಳೆಯ ಮುದ್ದಿಸಿ ಬಸಿರು ಪೊತ್ತವಳಿಂಗೆ |
ವ್ಯಸನವೆಷ್ಟಹುದೊ ನೋಡಿದರೆ ||
ಶಶಿತುಂಡನಿವನ ನಾಶಿಸುವುದೆಂತಕಟ ಮುಂ |
ದಸುರನೇಂ ಗೈವನೊ ಬಿಡಲು || ೨ ||

ಎಂದು ಯೋಚಿಸಿ ಪಾಕ ಮಂದಿರಕ್ಕೈತಂದು |
ಸಂದೇಹದೊಳು ಪಾಚಕನಿಗೆ ||
ಕಂದನ ಕೊಡುತ ಮತ್ತೆಂದಳೀ ಶಿಶುವನ್ನು |
ಕೊಂದು ಪಾಕವ ಮಾಡಲೆಂತು || ೩ || 93 ||

**ಮಧ್ಯಮಾವತಿ – ಆದಿ**

ಕೇಳಿ ಪಾಚಕ ತಾನು ತರಳನ ಪಿಡಿದು |
ತಾಳಿ ಚಿಂತೆಯನಾಗ  ಹುಂಡನ ಜರೆದು ||
ಬಾಲಾರ್ಕಕೋಟಿಸುಪ್ರಭೆಯನಾಂತಿರುವ |
ಭೂಲೋಲಲಕ್ಷಣದಿಂದ ಕೂಡಿರುವ || ೧ ||

ಪರಿಪರಿ ಪೊಗಳಿ ಕುಂಟಣಿಗೆ ಪೇಳಿದನು |
ಹರಿಸಲಾರೆನು ನಾನೀ ಕುಲರತ್ನನನ್ನು ||
ಕೊರಳ ಖಂಡಿಸಲು ಬಲ್ಲಿದನೆ ಪೇಳಿವನು |
ಪೊರೆಯುವದುಚಿತವೆಂದುಸುರಿದನವನು || ೨ ||

ನಡುಗಿ ಭೀತಿಯೊಳು ಪಾಚಕಗೆಂದಳಾಗ |
ಬಿಡುವನಲ್ಲಸುರೇಂದ್ರ ಹುಂಡಾಖ್ಯ ಕೆಡುಗ ||
ಸುಡಲೀತನಳಿದ ಮೇಲೊಂದು ವಾಸರವು |
ಪೊಡವಿಯೊಳಿರಲು ನಾ ಬಯಸುವೆ ನಿಜವು || ೩ || 96 ||

**ವಾರ್ಧಕ**

ಅರಿತೆಂದ ಪಾಚಕಂ ಪರಿಕಿಸುತ ಮೂರನೆಯ |
ರಿರದಿರಲು ನೀ ತಿಳಿಸದಿರುವಳಾದರೆ ಯುಕ್ತಿ |
ವಿರಚಿಸುವೆನೆನಲೊಪ್ಪೆ ತರಳನಂ ಕಂಕುಳಿನೊಳಿರಿಸಿ ವಸ್ತ್ರವನು ಹೊದೆದು ||
ಪೊರಟನಂತದ್ವಾರ ತ್ವರಿತದಿಂದುಳಿದಡವಿ |
ಗುರೆ ಗಮಿಸಿ ಮುನಿ ವಸಿಷ್ಠರ ಪರ್ಣಮಂದಿರದೊ |
ಳಿರಿಸಿ ಗುಪ್ತದಿ ಕೊಂದು  ಹರಿಣಮಂ ಪಾಕಗೈದೊರೆಯೆ ವಿದ್ಯುತೆಯಿತ್ತಳು || ೧ || 97 ||

**ಕಂದ ಪದ್ಯ**

ವಿದ್ಯುತೆ ತಂದಾ ಭಕ್ಷ್ಯವ |
ನದ್ವಯಮೆಂದೀಯೆ ಕೈಗೊಳುತ ಖಳನಾಗಳ್ ||
ಮೆದ್ದನು ಕುಳಿತರಿಗೀಯುತ |
ಲಿದ್ದನು ತೋಷಾಬ್ಧಿಯಲ್ಲಿ ಮುಳುಗಿದನಾತಂ || ೧ || 98 ||

**ಶರಷಟ್ಪದಿ**

ಕತ್ತಲೆಯಂ ಬೆರ | ಸುತ್ತಲಿ ಬರೆ ರವಿ |
ಯಿತ್ತಲು ಮಾಹೀಷ್ಮತಿಯಲ್ಲಿ ||
ಪೃಥ್ವೀಶನ ಸತಿ | ಪುತ್ರನ ಕಾಣದೆ |
ಮತ್ತಾಳಿಯರಲಿ ಪೇಳಿದಳು || ೧ || 99 ||

**ಸೌರಾಷ್ಟ್ರ - ಅಷ್ಟ**
ಏನಿದು ಮಲಗಿಹ | ಸೂನುವ ನೀವಾರು | ಕಂಡಿರೇನೇ || ಇನ್ನು |
ಮಾನಿನಿಮಣಿಗಳೆ | ಭಾನುಭಾಸಕನನ್ನು || ಕಂಡಿರೇನೇ || ೧ ||

ಜಾಣ ಬಾಲಕನೀಗ | ಕಾಣದೆ ಪೋದುದ | ಪೇಳಿರಮ್ಮ || ಎನ್ನ |
ಪ್ರಾಣರತುನ ಪೋಗೆ | ಕ್ಷೋಣಿಯೊಳಿಹುದೆಂತು || ಪೇಳಿರಮ್ಮ || ೨ ||

ಝಗಝಗಿಸುವ ಮುದ್ದು | ಮೊಗವನ್ನು ಪಿಡಿದೆತ್ತಿ || ತೋರಿರವ್ವ || ಅಯ್ಯೋ |
ಜಗದಿ ಬಾಳಿರಲಾರೆ | ಮಗುವನ್ನು ಕಾಣದೆ || ತೋರಿರವ್ವ || ೩ || 102 ||

**ನೀಲಾಂಬರಿ**
ಹತ್ತು ತಿಂಗಳವರೆಗೆ | ಏ ಮಗನೆ ನಿನ್ನ |
ಹೊತ್ತೆನುದರದೊಳಗೆ ||
ಹೆತ್ತ ಕಷ್ಟವ ಸ್ಮರಿಸಲು | ನಾನುಳಿದುದೆ ಮ|
ಹತ್ತರ ಘಟನೆಗಳು || ೧ ||

ಕಂದ ಜನಿಸದಿರಲು | ಇಲ್ಲಲ್ಲ ಎಂಬು |
ದೊಂದೆ ವ್ಯಸನವೀಗಲು ||
ಮುಂದುಗಾಣೆನು ಕೊರಳು | ಕೊಯ್ದಿಯೊ ಹಾಹಾ |
ನೊಂದೆನಿರುಳು ಹಗಲು || ೨ ||

ಅಕಟ ನಿನ್ನನು ಕಳೆದು | ನಿರ್ಭಾಗ್ಯೆ ಎಂದು |
ಸಕಲರಿಗರಿವಾದುದು ||
ಶಿಖಿ ದೇಹ ದಹಿಸುವುದು | ಸೈರಿಸಲಾರೆ |
ಸಖಿಯೇ ನಿಲ್ಲದು ಪ್ರಾಣವು || ೩ || 105 ||

**ಭಾಮಿನಿ**
ಕಾಂತನಂ ಕರೆದಳಲುತಲಿ ಭೂ |
ಕಾಂತಕಾಂತೆಯು ಭೂತಕಾಂತನ |
ಕಾಂತೆಯನುಜನ ಕಾಂತೆಗೆರಗುತ್ತೊರೆಯುವಂತೊರಗೆ ||
ಕಾಂತೆಯೊಬ್ಬಳು ಕಾಂತಿಹೀನೆ ನೃ |
ಕಾಂತಗೆರಗಲ್ಕೆಂದ ಶಿಖಿಯುಡು |
ಕಾಂತನಿಗೆ ಸೋಂಕಿದವೊಲಿಹುದೇನೆನಲು ಬೆಸಸಿದಳು || ೧ || 106 ||

**ಸಾರಂಗ - ಅಷ್ಟ**
ತೊಟ್ಟಿಲೊಳಗೆ ಸೌಖ್ಯದಿ | ನಿದ್ರೆಯ ಗೈಸು |
ತ್ತೊಟ್ಟು ಮಹೋತ್ಸಾಹದಿ ||
ಸೃಷ್ಟಿಗೊರಗುತೀಗ | ಥಟ್ಟನೆದ್ದೀಕ್ಷಿಸೆ |
ಕಷ್ಟ ಸಂಭವಿಸಿತಲ್ಲ || ಪೇಳಲೇನೆಲ್ಲ || ೧ ||

ಸೂನು ಎಲ್ಲಿಹುದೊ ಕಾಣೆ | ಸುಳ್ಳಲ್ಲ ಜೀಯ |
ಭಾನುಶಶಾಂಕರಾಣೆ ||
ದಾನವಾಂತಕ ಬಲ್ಲ | ಮೌನಿವಲ್ಲಭನಲ್ಲ |
ದೇನು ತೋರುವದೆಮಗೆ || ಈ ರೀತಿಯಾಗೆ || ೨ ||

ಮಹಿಷಿಯು ದುಗುಡದೊಳು | ಮೈಮರೆಯುತ್ತ |
ಮಹಿಯೊಳು ಮಲಗಿಹಳು ||
ಅಹಹ ಬಾಲಕನನ್ನು | ವಿಹಿತದಿ ಪೊರೆದಿಂತು |
ಕುಹಕಿಗಳಾರೊಯ್ದರೋ || ತೋರುವರಾರೋ || ೩ || 109 ||

**ಭಾಮಿನಿ**
ಎಂದ ಮಾತನು ಕೇಳುತೊಡನೈ |
ತಂದು ಪುಡುಕುತ ಮಗನೆ ಹಾ ಹಾ |
ಕಂದ ಬಾ ಬಾ ಬಾರೆನುತ್ತೊಡನೊಡನೆ ಹಂಬಲಿಸಿ ||
ಮುಂದುಗಾಣದೆ ಮರುಗುತಿರೆ ಸಚಿ |
ವೇಂದ್ರನೆಂದನು ದತ್ತಮೌನಿಪ |
ನೆಂದ ನುಡಿ ಪುಸಿಯಹುದೆ ಬರಿದಿನಿತಳಲಬೇಡರಸ || ೧ || 110 ||

**ಶಂಕರಾಭರಣ - ತ್ರಿವುಡೆ**
ಎನಿತು ಪೇಳಿದರಾಯುರಾಖ್ಯನ |
ಮನವು ಶಾಂತತೆಯಾಗದೆ ||
ತನಯನನು ನೆನೆನೆನೆವುತಿರೆ ಸುರ | ಮುನಿಪ ಬರಲು || ೧ ||

ಪರಿಕಿಸುತ ಸತ್ಕರಿಸಿ ನೃಪ ತಾ |
ನೆರಗಿ ಕಂಬನಿಯಿಂದಲಿ ||
ಚರಣಗಳ ತೋಯಿಸಲು ನೆಗಹುತ | ಲೊರೆದನಿಂತು || ೨ ||

ಚಂದ್ರಮಂಡಲ ಪೋಲುವಾಸ್ಯವಿ |
ದಿಂದು ಕಂದಿಹುದೇತಕೆ ||
ಬಂದುದೇನೆನಲೆನ್ನಲವನಿಪ | ನೆಂದನಾಗ || ೩ || 113 ||

**ಮಧ್ಯಮಾವತಿ - ಆದಿ**
ಸುರಮೌನಿನಾಥ ಕೇಳೆನ್ನ ಬಿನ್ನಪವ |
ಅರುಹುವುದೆಂತು ಸಂಚಿತಕರ್ಮಫಲವ ||
ತರಳರಿಲ್ಲದ ಶೋಕದಿಂದಿರುತಿರಲು |
ವರಮೌನಿ ದತ್ತಾತ್ರೇಯನ ಕಾರುಣ್ಯದೊಳು || ೧ ||

ಸುಂದರ ಕುವರನ ಹೊಂದಿಕೊಂಡಿರಲು |
ಮಂದಭಾಗ್ಯರಿಗೆ ಸೇರಿದರೇನು ಹೇಳು ||
ಇಂದು ರತ್ನವ ಕಾಣೆ ನಮ್ಮೀ ರಾಷ್ಟ್ರದೊಳು |
ಕಂದನೆಲ್ಲಿಹನೆಂದು ತಿಳುಹು ಕೃಪಾಳು || ೨ || 115 ||

**ಭಾಮಿನಿ**
ಈ ಪರಿಯ ಬೆಸನದೊಳಗಾಯು |
ಭೂಪ ಋಷಿಯೊಳು ಬೆಸಸುತಿರಲಾ |
ಚಾಪಲಾಂಬಕಿ ಬಂದು ಬಿದ್ದಳು ಮುನಿಯ ಚರಣದಲಿ ||
ಪಾಪಿ ನಿಜವಕಟಕಟ ತನಗನು |
ರೂಪ ಗುಣನಿಧಿ ಕುವರ ಜನಿಸುತ |
ಪೋಪುದಿದು ಘನವಾಯ್ತು ಪೇಳೆನಲೆಂದ ವಿಧಿಜಾತ || ೧ || 116 ||

**ಸೌರಾಷ್ಟ್ರ - ತ್ರಿವುಡೆ**
ಮಾನಿನೀಮಣಿ ಬರಿದೆ ಬಹುಪರಿ |
ಜ್ಞಾನ ತಪ್ಪಿದ ಹಾಗೆ ಚಿಂತಿಪೆ |
ಸೂನು ಒಂದೆಡೆ ಮೋದದಿಂದಿಹ | ಮಾನವೇಶ || ೧ ||

ಎಲ್ಲಿರಲು ಭಯವಿಲ್ಲ ವೈರಿಗ |
ಳೆಲ್ಲರೆದೆಗೆ ಕಠಾರಿಯಂದದಿ |
ಫುಲ್ಲನಾಭನ ಕರುಣದಿಂ ಸುಖ | ದಲ್ಲಿರುವನು || ೨ ||

ಪುರಕೆ ಬರುವನು ವಿಭವದಿಂ ಮನ |
ಮರುಗದಿಹುದೆಂದೊರೆದು ಧೈರ್ಯವ |
ಶರಧಿಗೃಹಹರಿಯೆನುತ ತೆರಳಿದ | ಸುರಮುನೀಶ || ೩ ||

ನೃಪಗೆ ಶಾಂತತೆಯಾಗಲತ್ತಲು |
ವಿಪಿನದಲ್ಲಿ ವಸಿಷ್ಠ ಋಷಿವರ |
ತಪ ಸಮಾಧಿಯನಿಳುಹೆ ಕಂಡನು | ಚಪಲನನ್ನು || ೪ || 120 ||

**ಕೇದಾರಗೌಳ - ಅಷ್ಟ**
ಹರಹರನಿವನ್ಯಾವ ದೊರೆಯ ಕುಮಾರನೊ |
ತರುಣಾರ್ಕತೇಜದಲಿ ||
ಮೆರೆವ ಸುಲಕ್ಷಣ ಧರಿಸಿಹನೆನುತಲಿ |
ಕರದಿಂದರ್ಭಕನನೆತ್ತಿ || ೧ ||

ಥಟ್ಟನೆ ಮುನಿಪ ವಸಿಷ್ಠ ತನ್ನಯ ಜ್ಞಾನ |
ದೃಷ್ಟಿಯಿಂ ತಿಳಿದೆಲ್ಲವ ||
ಸೃಷ್ಟೀಶ ಕುವರನ ಕೊಟ್ಟರುಂಧತಿಯಿಂದ |
ತುಷ್ಟಿಯಿಂ ಸಲಹಿದನು || ೨ ||

ಹಾಲು ಸಕ್ಕರೆ ಕಂದ ಮೂಲ ಹಣ್ಣುಗಳನ್ನು |
ಬಾಲನಿಗುಣಿಸುತಲಿ ||
ಮೇಲೆ ಕಂಚುಕ ಗೆಜ್ಜೆ ಜಾಲ ಡಾಬುಗಳು ವಿ |
ಶಾಲದಾಭರಣವಿಟ್ಟು || ೩ || 123 ||

**ಕಂದ ಪದ್ಯ**
ಸಲಹಿದರಿಂತಾ ಹುಡುಗನ |
ಬಲು ಪ್ರೀತಿಸಿ ಮೂರು ವರುಷಗಳ ಪರಿಯಂತಂ ||
ನಲಿನಲಿದೈದುವ ಕುವರಗೆ |
ಕಲಿಸಲು ವಿದ್ಯಾದಿಯಿಂದ ಸದ್ಬುದ್ಧಿಗಳಂ || ೧ || 124 ||

**ದ್ವಿಪದಿ**
ಚೌಲೋಪನಯನವನು ಮಾಡುತಾ ಮೇಗೆ |
ಪೇಳೆ ಶರಶಾಸ್ತ್ರ ಹನ್ನೆರಡಬ್ದಮಾಗೆ || ೧ ||

ತರಳ ಕೇಳ್ ಜನನಿ ಜನಕರ ಕಂಡರಿದನು |
ಚರಣದಲ್ಲಿಟ್ಟು ವಂದಿಸುವುದರಿಗಳನು || ೨ ||

ಪರಿಕಿಸಿದರೆತ್ತಿ ಶಿಂಜಿನಿಗೆ ಶರವಿಟ್ಟು |
ತರಿವುದಾಕರ್ಣಾಂತಕೆಳೆಯುತಿದ ಬಿಟ್ಟು || ೩ || 127 ||

**ಕಂದ ಪದ್ಯ**
ಚರಣಕೆ ನಮಿಸುತ ಪೇಳಿದ |
ಗುರುವರ್ಯನೆ ಮತ್ಪಿತಂ ಜನನಿ ಯಾರರಿಯೆಂ ||
ಕರುಣದಿ ತಿಳುಹಿಸು ಎನ್ನಯ |
ಪುರವೆಲ್ಲಿದೆ ಎಂಬ ನಹುಷಂಗೆಂದ ಮುನೀಂದ್ರಂ || ೧ || 128 ||

**ಬೇಗಡೆ - ಅಷ್ಟ**
ಇಂದುವಂಶಜನಾಯುರಾಹ್ವಯನು | ಮಾಹೀಷ್ಮತೀ ನಗ |
ರೇಂದ್ರನಾಗಿಹ ಕೇಳು ತ್ವತ್ಪಿತನು ||
ಇಂದುಮತಿ ಹಡೆದಂದದಿಂದಿರ |
ಲಂಧಚರ ಕಾಳಾವತೀ ನಗ |
ರೇಂದ್ರನಹ ಹುಂಡಾಖ್ಯ ಹಗೆಯಿಂ |
ದೊಂದು ದಿನ ಕದ್ದೊಯ್ದ ನಿನ್ನನು || ೧ ||

ಕಡಿದು ಪಾಕವ ಮಾಡಬೇಕೆನುತ | ಸತಿ ವಿದ್ಯುತೆಗೆ ಖಳ |
ಕೊಡಲು ದಾಸಿಯೊಳಿತ್ತಡವಳಳುತ ||
ಅಡುಗೆ ಮಾಳ್ಪಗೆ ನೀಡಲವನಿ |
ಲ್ಲಿಡುತ ತೆರಳಲು ಕಂಡು ನಿನ್ನ |
ನ್ನೆಡೆಬಿಡದೆ ಪೋಷಿಸಿದೆ ಕರ್ಬುರ |
ರೊಡೆಯಗರಿಯದ ಹಾಗೆ ಗುಪ್ತದಿ || ೨ ||

ಕೇಳಿ ನಹುಷನು ಗುರುವಿಗಭಿನಮಿಸಿ | ಖಳನೊಡನೆ ಸಮರಕೆ |
ವೀಳೆಯವ ನೀಡೆನ್ನಲಾರ್ಭಟಿಸಿ ||
ಬಾಲ ಸೈರಿಸು ಬರಿದೆ ಪೋದರೆ |
ಕಾಳಗದಿ ಜಯಿಸುವುದಸಾಧ್ಯವು |
ನಾಳಿಕೋದ್ಭವನನ್ನೊಲಿಸುತನು |
ಕೂಲವಂ ಪಡೆದೈದು ಕದನಕೆ || ೩ || 131 ||

**ಭಾಮಿನಿ**
ಗುರುವಿನಿಂದುಪದೇಶ ಪಡೆದೈ |
ತರುತ ತಪವನಕಾಗಳೊಂದೇ |
ಚರಣದಲಿ ನಿಂತಾಗ ನುತಿಸಿದನೇಕಚಿತ್ತದಲಿ ||
ವರಪಿತಾಮಹ ವಿಶ್ವತಃಸೃಜ |
ಸುರವ್ರಜಾಧಿಪನಮಿತಪದಯುಗ |
ಪರಮಭಕ್ತಾಭೀಷ್ಟದಾತ ಸರಸ್ವತೀಕಾಂತ || ೧ || 132 ||

**ಶೃಂಗಾರಿ - ಏಕ**
ಏಳು ಏಳಯ್ಯ ತಪವ | ನಿಲ್ಲಿಸು ನಿನ್ನೊಳ್ |
ತಾಳಿ ಬಂದಿಹೆ ಹಿತವ || ಪ ||
ಬಾಲ ಸೈರಿಸು ತವ | ಶೀಲಕೆ ಮೆಚ್ಚಿಹೆ |
ಕೇಳು ಬೇಕಾದ ವರ | ಪಾಲಿಸುವೆನು ನಿಜ || ಅ.ಪ ||
ಕೇಳುತೆರಗಿ ವಿಧಿಗೆ | ಬಾಲನು ನಹುಷ |
ಪೇಳಿದ ರಣವೆಸಗೆ ||
ಕೋಲುಹಸ್ತ್ಯಶ್ವಾದಿ | ಮೇಲೆ ಸ್ಯಂದನಬಲ |
ಕಾಳಗದೊಳು ಜಯ | ಪಾಲಿಸು ಕರುಣದಿ || ೧ ||

ತೆರಳು ಮುಂದಿಹ ದಾರಿಗೆ | ದಿಕ್ಪಾಲರೆಲ್ಲ |
ದೊರಕುತಿತ್ತಪರಾಜಿಗೆ ||
ಸರುವ ಸನ್ನಾಹದಿ | ಬರುವರೊಡನೆ ಜಯ |
ದೊರಕುವದೆಂದಜ | ತೆರಳಲೈದಿದನಿವ || ೨ || 134 ||

**ವಾರ್ಧಕ**
ಪೊರಟನಿತ್ತಲು ಬೊಮ್ಮ ಸ್ವರಕೆ ತೆರಳಲು ನೋಡಿ |
ಪುರುಹೂತ ಪೀಠವನ್ನಿರಿಸಿ ಕುಶಲವ ಬೆಸಸ |
ಲೊರೆದ ಹುಂಡನ ಕೊಲಲು ತರಳ ತೆರಳುವ ಕೊಡಿಸು ಸರ್ವಸನನ್ಹವೆನ್ನಲು ||
ಸುರಸಮೂಹಾಷ್ಟದಿಗ್ವರರೊಡನೆ ಬಂದಿತ್ತ |
ಕರಿಸೇನೆಯನ್ನಗ್ನಿ ವರರಥವ ಯಮನಿಷುಧಿ |
ನಿಋತಿಯಸಿ ಧನಪ ಹಯ ಮರುತ ಕವಚವ ವರುಣ ಶರವನೀಶಾನ ವರವ || ೧ || 135 ||

**ಕಂದ ಪದ್ಯ**
ಕೊಡಲಡಿಗೆರಗಿ ರಥವಡರಲ್ |
ಪಡೆ ನಡೆದುದು ಹುಂಡನುಪವನಕೆ ತತ್ಪಾಲಕರ್ ||
ತಡಿ ತಡಿರಡಿಯಿಡೆ ಬಿಡೆವೆಂ |
ದೊಡೆ ಬಡಿದಟ್ಟಲವರ್ಯೆದಿ ಒಡೆಯಗೆ ಪೇಳ್ದರ್ || ೧ || 136 ||

**ಮುಖಾರಿ - ಆದಿ**
ಕೇಳಬೇಕೀಗ ನಮ್ಮ ಜೀಯ | ಬಲ್ಪೇಗದೊಳೀಗ |
ಕಾಳಾವತೀಶ ದೈತ್ಯರಾಯ || ಪ ||
ಪೇಳಲು ಕೊರಳೊಳು | ಏಳದು ಸ್ವರ ಭಯ |
ತಾಳಿಹೆವಭಯವ | ಪಾಲಿಪುದಯ್ಯ || ಅ.ಪ ||
ಧರಣೇಶಬಾಲನಂದದೊಳಿರುವ | ಸೇನಾದಿಗಳೆಲ್ಲ |
ಸುರರಾಜನಲ್ಲಿ ನೆಲೆಗೊಂಡಿರುವ ||
ದುರುಳರ ಹಾಗಿದೆ | ಪರಿಕಿಸಲವುಗಳು |
ಶರಧಿಯೊಳೊತ್ತುವ | ತೆರೆಯಂದದೊಳವ |
ರುರೆ ಮುಂದೈತಂ | ದರು ವನದೆಡೆಗತಿ |
ಕರಿಗಳು ಬಾಳೆಯ | ತರಿದವು ಮತ್ತೆ || ೧ ||

ಗಡಣಗಳೆಲ್ಲ ಮುಂದೈತರಲು | ಉದ್ಯಾನದಲಿಪ್ಪ |
ಗಿಡ ವೃಕ್ಷ ಬಳ್ಳಿ ಸಂದೋಹಗಳು ||
ಬುಡ ನಡುಗುತ ತಲೆ | ಯಡಿಯಾಗಲು ಪುಡಿ |
ಪುಡಿಯಾದುದು ನ | ಮ್ಮೊಡಲೊಳು ದಳ್ಳುರಿ |
ಕಿಡಿ ನೆಲೆಗೊಂಡಿರೆ | ಕಡು ಸಂಕಟದಿಂ |
ಪಡೆ ಸಹಿತಲಿ ನಾವ್ | ಝಡಿದಾರ್ಭಟಿಸುತ | ನಡೆದೆವು ಕೋಪಿಸಿ || ೨ ||

ಕಲಹಕಂಜುವುದುಂಟೆ ನಾವು | ಸಂಗರವನು ಗೈದು |
ಗೆಲುವ ಯತ್ನಗಳನ್ನು ಪುಡುಕಿದೆವು ||
ಕಲಿಮುಖ ತರಳನು | ಬಲು ಪಾಪಿಯು ಒಂ |
ದಲಗನು ತೂರಲು | ತಲೆ ದಿಮ್ಮನೆ ಭೂ |
ತಳಕಲ್ಲಿಯೆ ಬೀ | ಳಲು ಬಡಿದಟ್ಟಿದ |
ರುಳಿಯದು ಪುರ ನೀ | ಕೊಳುಗುಳ ಕೇಳೈ || ೩ || 139 ||

**ಮಾರವಿ - ಏಕ**
ಕೇಳುತ ರೋಷವ | ತಾಳುತ ಕಂಪಗೆ |
ಪೇಳಿದ ಸುರನರರ ||
ಪಾಳಯವೈದುತ | ದಾಳಿಯನಿಟ್ಟರೆ |
ಹಾಳೆಸಗಿದರವರ || ೧ ||

ಪರಿಕಿಸಬೇಕೀ | ವರೆಗಿರದಿಹ ಪರಿ |
ದೊರಕಿಹುದಿಂದಿನಲಿ ||
ಕರೆಸೆಮ್ಮಯ ಬಲ | ಧುರವೆಸಗಲು ನೀ |
ಪೊರಡಿಸು ವೇಗದಲಿ || ೨ ||

ಇಂತೆನೆ ಕಂಪನು | ತಿಂಥಿಣಿ ಕೂಡಿಸಿ |
ತಾಂ ತೆರಳುವೆನೆನುತ ||
ಸಂತಸದಿಂ ಖಳ | ಕಾಂತನೊಳಪ್ಪಣೆ |
ಯಂ ತಳೆದೈದಿದ ತಾ || ೩ || 142 ||

**ವಾರ್ಧಕ**
ಖಳರು ಬೊಬ್ಬಿರಿದು ಬಹ ನಾದದಿಂ ಭೇದದಿಂ |
ಝಳಪಿಸುವ ಶತಕರ ಕೃಪಾಣದಿಂ ಬಾಣದಿಂ |
ಬಳಿಕ ಶಿಂಜಿನಿಗದಂ ಪೂಡುತಂ ನೋಡುತಂ ನಡೆಯಲುಪವನಕೆ ಧುರಕೆ ||
ಬಲುವಿರೋಧಿಗಳಧಿಕ ಕೋಪದಿಂ ತಾಪದಿಂ |
ದೆಳೆದು ಬಿಡುತಿಹ ಕೂರಲಗುಗಳಿಂ ಬಗೆಗಳಿಂ |
ದಿಳೆಗುರುಳ್ಚಿಸೆ ಭೂಮಿ ಗಡಗಡನೆ ನಡುಗಿತೆನೆ ಬಂದ ವಿಪ್ರಾರಿ ಸಾರಿ || ೧ || 143 ||

**ಶಂಕರಾಭರಣ - ಮಟ್ಟೆ**
ಕಂಡು ವೀರಬಾಹು ಖಳನ | ಚಂಡರುದ್ರನಂತೆ ಧನುವ |
ಕೊಂಡುಸುರ್ದ ನಿನ್ನ ತಲೆಯ | ಚಂಡನಾಡುವೆ || ೧ ||

ಮುಚ್ಚು ಮುಚ್ಚು ಬಾಯ ಬಿಚ್ಚ | ಲೆಚ್ಚರಿಕೆಯ ಬಚ್ಚಿಕೊಳದೆ |
ಹುಚ್ಚರಂತೆ ಉಚ್ಚರಿಸಲು | ಚುಚ್ಚಿ ಕೊಚ್ಚುವೆ || ೨ ||

ಕಷ್ಟ ಕೊಟ್ಟ ಭ್ರಷ್ಟ ನಿನ್ನ| ದುಷ್ಟಕೃತ್ಯಕಿಟ್ಟರೊಟ್ಟು |
ಶಿಷ್ಟರಿಷ್ಟ ನಷ್ಟವಹುದು | ಕುಟ್ಟಿ ತಟ್ಟುವೆ || ೩ || 146 ||

**ಘಂಟಾರವ - ಅಷ್ಟ**
ಭಳಿರೆ ನೀನಾರು | ಗಳಹುವುದೇತಕೆ ||
ಕಲಹವೆನ್ನೊಳು | ಸುಲಭವಲ್ಲವು |
ತೊಲಗು ತೊಲಗೆಂದೆಚ್ಚನು || ೧ ||

ವೀರ ತುಂಡಿಸಿ | ನಾರಾಚ ಬಿಡುತಲಿ ||
ಸಾರುತಲಿ ಮದ | ವೇರಿ ಬರುತಿಹೆ |
ಶೂರತೆಯ ತೋರೆಂದನು || ೨ ||

ವಿಪ್ರವೈರಿ ಬ | ಹು ಪ್ರತಾಪದಿ ಕೊಂಡ ||
ದಪ್ರತಿಕಳಂ | ಬ ಪ್ರಯೋಗಿಸೆ |
ಕ್ಷಿಪ್ರದಿಂ ಕಡಿದೆಚ್ಚನು || ೩ || 149 ||

**ಭಾಮಿನಿ**
ವಿಲಯಜಲಧರನಂತೆ ರೌದ್ರವ |
ತಳೆದು ಖಳ ಗರ್ಜಿಸುತ ಕರ್ಬೊಗೆ |
ಗಳನುಗುಳುವಗ್ನ್ಯಸ್ತ್ರವಂ ಬಿಡೆ ವರುಣನಿಂ ಶಮಿಸಿ ||
ಕಲಹದಲಿ ಬಾಹುಕನು ಶಕ್ತಿಯ |
ಸೆಳೆದು ಗಳಕಿಡೆ ವಿಪ್ರವೈರಿಯ |
ತಲೆಯುರುಳಿತಿಳೆಗಿದನು ಕಾಣುತ ಕಂಪನೈತಂದ || ೧ || 150 ||

**ಕೇದಾರಗೌಳ - ಝಂಪೆ**
ತಡೆದೆಂದ ಬಾಹುಕನೊಳು | ಉಪವನವ |
ಪುಡಿಗೈದುದೇಕೆ ಪೇಳು ||
ಪಿಡಿದ ಕೂರಲಗಿನಿಂದ | ನಿನ್ನ ತಲೆ |
ಪೊಡವಿಗುರುಳಿಸುವೆನೆಂದ || ೧ ||

ಕೇಳುವೆಯ ಕಾರ್ಯವನ್ನು | ಮುಖ್ಯವಿದು |
ಪೇಳುವೆನು ಹುಂಡನನ್ನು ||
ಕಾಲನಲ್ಲಿಗೆ ಕಳುಹಲು | ಬಂದಿಹೆವು |
ಕಾಳಗಕೆ ಕರೆಸೆನ್ನಲು || ೨ ||

ಯಮಭಟರು ಬಂಧಿಸಿರುವ | ಪಾಶವಂ |
ಶಮಿಸಲಾರದ ಮಾನವ ||
ತುಮುಲದಲಿ ಯಮನ ಗೆಲುವೆ | ಎಂಬಂತೆ |
ಭ್ರಮಿಸುತೀಗಿಂತೊರಲುವೆ || ೩ ||

ಸುಡು ಸುಡೀ ಮೂರ್ಖತನವ | ನೋಡು ನೋ |
ಡೆಡೆಬಿಡದೆ ಬಿದ್ದ ತನುವ ||
ಕಡಿಕಡಿದು ಬಿಡುವೆ ನಾನು | ತಡೆವರಾರ್ |
ಫಡಫಡೆಂದೆಚ್ಚಡವನು || ೪ ||

ತರಿದು ತಿಮಿರಾಸ್ತ್ರ ಬಿಡಲು | ಬಾಹುಕನು |
ತರಣಿಯಸ್ತ್ರದಿ ಕಡಿಯಲು ||
ದುರುಳ ಕಂಪನು ಶೂಲವ | ತೆಗೆದಿಡಲು |
ಧರಣಿಗೊರಗಿದನಾಗವ || ೫ || 155 ||

**ಮಾರವಿ - ಏಕ**
ಪರಿಕಿಸಿ ನಹುಷನು | ಭರದಿಂ ಪಲ್ಗಡಿ |
ದರಿಸಮ್ಮುಖಿಕಾಗಿ ||
ತುರಗವ ಹಾರಿಸು | ತುರಕೆಸಲಂಬನು |
ದುರುಳನೆಂದ ರೇಗಿ || ೧ ||

ನರಗುರಿ ನಿನ್ನ | ನ್ನರಿದರಿದರಿವೆನು |
ಸುರನರ ಪರಿವಾರ ||
ಎರಕದೊಳೆಲ್ಲಿಂ | ದೊರೆ ಬಂದುದ ಪೆಸ |
ರಿರುತಿಹುದೇಂ ವೀರ || ೨ ||

ಉಸುರುವೆ ಕೇಳಾಯುರನಾತ್ಮಭವ ನ |
ಹುಷ ಪೆಸರಾಂತಿಹೆನು ||
ಬಿಸಜಭವನ ಮಾ | ನಸಸುತನೆಡೆಯಿಂ |
ದಸುರನೆ ಬಂದಿಹೆನು || ೩ ||

ಭಳಿರೆ ತರಳ ತನು | ಕಳೆಯುವ ಮನದಿಂ |
ದಳುಕದೆ ಬಂದೆ ಖರೆ ||
ಅಳಿಯುವಿ ನಿನ್ನಯ | ತಲೆಯನು ಕಾಯುವ |
ಬಲವಂತನನು ಕರೆ || ೪ ||

ಛೀ ದುಷ್ಟನೆ ಛೀ | ಛೀ ದುರುಳನೆ ಛೀ |
ಛೀ ದುರಿತೌಘನೆ ಛೀ ||
ಆದರಿಸೆಂದಿಡ | ಲಾ ದಿನಪತಿಶರ |
ಕೈದಿದ ನೆಲಗಚ್ಚಿ || ೫ || 160 ||

**ಕಂದ ಪದ್ಯ**
ಸಂಗರದೊಳು ಕಂಪನ ಕೊಂ |
ದುಂ ಗರ್ಜಿಸೆ ಪಿಂದೆ ಸರಿದರುಳಿದಿಹ ವೀರರ್ ||
ಭಂಗಂ ಬಡುತಂ ಚಾರಕ |
ರಂಗೈ ಜೋಡಿಸುತ ಹುಂಡಗೀಪರಿ ಪೇಳ್ದರ್ || ೧ || 161 ||

**ಮಧ್ಯಮಾವತಿ - ಆದಿ**
ಕೇಳಯ್ಯ ಖಳರಾಯ ನಾವೆಂಬ ಮಾತ |
ಪೇಳುವುದಿನ್ನೇನು ಲೋಕವಿಖ್ಯಾತ ||
ಪಾಳಯವೆರಸಿ ಬಂದಿಹನೋರ್ವ ನರನು |
ಕಾಲನಾಗಿಹ ನಮ್ಮ ಪಾಲಿಗಿಂದಿವನು || ೧ ||

ಸೋಮವಂಶಜನಾಯುಭೂಪಾಲನಂತೆ |
ಆ ಮಹಾತ್ಮನ ಸುತ ನಹುಷ ತಾನಂತೆ ||
ಪ್ರೇಮದಿ ಸುರಸೇನೆಯನು ಕೂಡಿ ಬಂದ |
ಈ ಮಹಾ ಸಮರದಿ ಕಂಪನ ಕೊಂದ || ೨ || 163 ||

**ಸೌರಾಷ್ಟ್ರ - ತ್ರಿವುಡೆ**
ಚರರ ನುಡಿಯನು ಕೇಳಿ ಹುಂಡಾ |
ಸುರನು ಪೇಳಿದ ಮೊದಲು ವಿದ್ಯುತೆ |
ಕರದಿ ಕೊಲಿಸಿದೆನೆಂತು ಬದುಕಿದ | ನರರೆ ಚೋದ್ಯ || ೧ ||

ಆಗಲಿಂಥಾ ನಹುಷ ನೂರಾ |
ರಾಗಿ ಬಂದರು ಬೆದರೆ ಸಂಗರ |
ಕಾಗಿ ನಮ್ಮಯ ಸೈನ್ಯ ಪೊರಡಲಿ | ವೇಗದಿಂದ || ೨ || 165 ||

**ವಾರ್ಧಕ**
ಇನಿತಪ್ಪಣೆಯ ನೀಡಲಾಕ್ಷಣವೆ ಮಾಯಾವಿ |
ವಿನಯದಿಂ ಪತ್ತಿ ಕರಿ ತುರಗ ರಥಗಳ ತರಿಸಿ |
ರಣಭೇರಿ ಕಹಳೆ ದುಂದುಭಿ ಢಕ್ಕ ವಾದ್ಯರವದೊಡನೆ ಸನ್ನಹ ಗೈದನು ||
ಅನಿತರೊಳು ಛತ್ರ ಚಾಮರ ಮಕರ ತೋರಣವ |
ದನುಜಬಲದಿದಿರಿನಲಿ ಪಿಡಿದು ಜಯಜಯವೆನಲ್ |
ಕನಕರಥವನ್ನಡರುತುಪವನಕ್ಕೈತಂದನಂಬುಧಿಯ ಘೋಷದಿಂದ || ೧ || 166 ||

**ಭಾಮಿನಿ**
ಪರಿಕಿಸುತ ಶತಮನ್ಯುವಾಕ್ಷಣ |
ಭರಿತ ಸೇನೆಯ ನಿಲಿಸಿ ತನ್ನಯ |
ಕರದಿ ಧನುಶರಗಳನು ಧರಿಸುತ ಗರ್ಜಿಸಿದನಂದು ||
ಭರದೊಳೆಂದನು ದೀರ್ಘನಾಸಕ |
ನುರಿಯನುಗುಳುತ ಕಂಗಳೊಳು ಫಡ |
ತರಿವೆ ತಲೆಯನು ಮರುಳೆ ನಿಲ್ಲೆನಲೆಂದ ವಾಸವನು || ೧ || 167 ||

**ಭೈರವಿ - ಅಷ್ಟ**
ದುಷ್ಟ ರಕ್ಕಸನೆ ನಿನ್ನ | ನಾಮಾಂಕಿತ |
ಥಟ್ಟನೆ ಪೇಳು ಮುನ್ನ ||
ದಿಟ್ಟತನವ ನೋಡೆಂ | ದಿಟ್ಟನಸ್ತ್ರವನು ತ್ರಿ |
ವಿಷ್ಟಪಾಧಿಪಗೆಂದನು || ೧ ||

ದೀರ್ಘನಾಸಿಕನು ನಾನು | ನಿನ್ನಯ ತಲೆ |
ದೀರ್ಘಸಮಯ ಬಿಡೆನು ||
ಅರ್ಗೆ ಪೇಳುವೆಯೆಂದು | ಕೂರ್ಗಣೆಯೆಸಲಿಂದ್ರ |
ನೂರ್ಗಣೆ ಸುರಿಸಿದನು || ೨ ||

ಖೂಳನು ತರಿಯುತಾಗ | ಖಡ್ಗದೊಳೀಗ |
ಸೀಳುವೆನೆನಲು ಬೇಗ ||
ಶೂಲವ ಬಿಡಲಿಂದ್ರ | ಕಾಲನ ಗೃಹದಿ ನಿ |
ಜಾಲಾಯವನ್ನು ಗೈದ || ೩ || 170 ||

**ಸೌರಾಷ್ಟ್ರ - ತ್ರಿವುಡೆ**

ಸ್ಥೂಲನಾಸಿಕನಳಿಯೆ ಪವಿರದ |
ಶೂಲಿಯಂತೈತರೆ **ಧನಂಜಯ** |
ಮೇಲೆನಿಪ ಸಾಹಸದಿ ಪೊಡೆದನು | ಕಾಳಗದೊಳು || ೧ ||

ಎಲವೊ ವೈಶ್ವಾನರನೆ ನಡೆನಡೆ |
ಚಲುವ ಘೃತ ಪಾಯಸವು ಸಿಕ್ಕದು |
ಛಲವ ತೊಟ್ಟರೆ ತಲೆಗಳುಳಿಯವು | ಕಲಹದಲ್ಲಿ || ೨ ||

ಉಂಡು ಯಜ್ಞದಿ **ಸತ್ತನಹೆ** ನಿಲು |
ಚಂಡನಾಡುವೆನೆಂದು ಶಕ್ತಿಯ |
ಚಂಡಸತ್ತ್ವದೊಳೆಚ್ಚಡಳಿದನು | ಭಂಡಭಟನು || ೩ || 173 ||

**ಭೈರವಿ - ಏಕ**

ಅತ್ತಲು ಘೋರಾನನನೂ | ಸಮ |
ವರ್ತಿಯೊಡನೆ ಸಮರವನು ||
ಸತ್ತ್ವದಿ ಗೈಯುವೆನೆಂದು | ಮುಂ |
ದೊತ್ತುತ ಪೇಳಿದನಂದು || ೧ ||

ಫಡ ಪ್ರೇತಾಧಿಪ ನಿನ್ನ | ಹೆಡೆ |
ಮುಡಿ ಕಟ್ಟುತ ನಿಮಿಷದಿ ನಾ ||
ಹುಡುಗನ ಕಡಿದೀ ಧರೆಗೆ | ಕೆಡೆ |
ದೊಡೆಯಗೆ ತೋರಿಪೆ ಕಡೆಗೆ || ೨ ||

ಘೋರಾಸ್ಯನೆ ಪಾಶದಲಿ | ಬಿಗಿ |
ದಾ ರೌರವ ನರಕದಲಿ ||
ಸೇರಿಸುವೆನು ಬಹು ಕಾಲ | ಎನೆ |
ಪೌರುಷವೇತಕೊ ಕಾಲ || ೩ ||

ವಿಧಿಲಿಪಿಯನು ಮೀರುತಲಿ | ನೀ |
ವಿಧಿಸುವುದೇನಾಜಿಯಲಿ ||
ಮದನಾರಿಯ ವಶವರ್ತಿ | ನಾ |
ನಿದ ಬಲ್ಲೆನು ಸಮವರ್ತಿ || ೪ ||

ಧಾತನು ವಿಧಿಸುವುದೇನು | ನೀ |
ಯಾತಕೆ ಶಿಶುಪಶುಗಳನು ||
ಘಾತಿಸುತಘ ಗಳಿಸಿಡಲು | ಲಿಪಿ |
ಸೀತೆರ ಗೈದೆಯ ಪೇಳು || ೫ || 178 ||

**ಭಾಮಿನಿ**
ಅಂತಕನು ನಾನೆಂಬ ಗರ್ವವ |
ನಂತ್ಯಗೈಯುವೆನೆಂದು ಶರ ಕ |
ರ್ಣಾಂತರಕ್ಕೆಳೆದೆಸಲು ಕಡಿದೆತ್ತುತಲಿ ದಂಡವನು ||
ಪಂಥವಿರಲಿದಿರಾಗೆನಲು ಭಯ |
ಮಂ ತೊರೆಯುತ್ತೈತರಲು ಕಂಡು ಕೃ |
ತಾಂತಕನು ನಾರಕಕೆ ಒಯ್ದನು ಪೊಡೆದು ಪಾಪಿಯನು || ೧ || 179 ||

**ವಾರ್ಧಕ**
ನಿಋತಿಗಂ ಮಾಯಾವಿ ವರುಣಗಂ ಚೋರಪತಿ |
ಮರುತಗಂ ದುರ್ಗಂಧ ಹರಸಖಿಗೆ ಕ್ರೂರರವ |
ತರಣಿಜಗೆ ಘೋರಾಸ್ಯ ಸರಿಸೆಣಸಲಿದಿರಾಂತು ಹರಣವನ್ನರ್ಪಿಸಿದರು ||
ಪರಿಯರಿತು ಹುಂಡ ಬಿಲ್ ಧರಿಸಿ ರಥವೇರಿ ಬಲ್ |
ಭರದಿಂದ ತಡೆದು ಪಲ್ ಗರಗರನೆ ಮಸೆದೆಸಲ್ |
ಸರಳ ಖಂಡಿಸಿ ಬಿಡಲ್ ತರಳ ಬಿಡೆಬಿಡೆನೆನಲ್ ಕೆರಳಿ ನಹುಷನು ಪೇಳ್ದನು || ೧ || 180 ||

**ಭೋಗ ಮಟ್ಟೆ**
ಇಷ್ಟು ದಿವಸ ನಿನ್ನನೀ ವಿ | ಶಿಷ್ಟ ಖಳರ ಭಾರವನ್ನು |
ಸೃಷ್ಟಿದೇವಿಯೆಂತು ತಾಳ್ದರರರೆ ಚೋದ್ಯವು ||
ಭ್ರಷ್ಟ ಮುಚ್ಚು ಬಾಯ ನೀನು | ಹುಟ್ಟಿದಂದಿನಿಂದ ನಮಗ |
ರಿಷ್ಟವೆಂದು ಬಲ್ಲೆ ಪರಿಹರವನು ಗೈವನು || ೧ ||

ನೀನು ಹುಟ್ಟಿ ತ್ರೈಜಗಕ್ಕೆ | ಹಾನಿಯಾಯಿತೀಗಳದಕೆ |
ಭಾನುಸೂನುವೆಡೆಗೆ ಕಳುಹಿಬಿಡುವೆನೆಂದನು ||
ದಾನವರ ವಿಚಾರವರಿಯೆ | ಮಾನವನು ವಯಸ್ಸಿನಲ್ಲಿ |
ಸೂನುವಹೆ ಸಮರ್ಥನೆಂತು | ಕೊಲಲು ಎನ್ನನು || ೨ ||

ಹತ್ತು ಎರಡು ದಿನದ ಶಿಶುವು | ಎತ್ತಿ ತಂದೆ ಕೊಲಲು ಹಿಂದೆ |
ವ್ಯರ್ಥವಾದುದಿಂದದೆಂತು | ಗೆಲುವೆ ಎನ್ನನು ||
ಗೋತ್ರಹರನಿಗಂಜದಿಹೆವು | ರಾತ್ರಿಚರರು ಇಂದ್ರಜಾಲ |
ಸೂತ್ರದಿಂದ ಲೋಕ ತಿರುಹಿ | ಬಿಡಲು ಬಲ್ಲೆನು || ೩ ||

ಖುಲ್ಲ ಶಕ್ತಿ ತೋರು ಎಂದು | ಬಿಲ್ಲನೆತ್ತಿ ಬಾಣ ಹೂಡಿ |
ಪಲ್ಲಕಡಿವುತೆಚ್ಚನಸುರ | ಗಾ ವಿಚಕ್ಷಣ ||
ಇಲ್ಲ ಕರುಣವಿನ್ನು ಸಾರಿ | ಕೊಲ್ಲಲಘವು ಹೊದ್ದದೆಂದು |
ಬಲ್ಲೆನೆನುತ ಕೋಲನೆಚ್ಚ ನಹುಷನಾ ಕ್ಷಣ || ೪ ||

ಎಚ್ಚುದನ್ನು ತರಿದು ನಹುಷ | ನಚ್ಯುತನ್ನ ಸ್ಮರಿಸುತೌಡು |
ಗಚ್ಚಿ ಶಕ್ತಿ ಸೆಳೆದು ಬಿಟ್ಟ | ನಧಿಕರೋಷದಿ ||
ಬೆಚ್ಚಿತಸುರಸೇನೆ ಸಿಡಿಲ | ಗಿಚ್ಚಿನಂತೆ ಭಸ್ಮಗೈದು |
ದಚ್ಚರಿಯವ ಕೇಳಿರಿದ್ದ ನಹುಷ ತೋಷದಿ || ೫ || 185 ||

**ಭಾಮಿನಿ**
ರಾತ್ರಿಚರನೈದಿದನು ಎಂದಿರೆ |
ರಾತ್ರಿಯಾದುದು ಸಿಂಹ ಕರಿ ಹುಲಿ |
ವ್ರಾತವೈತರೆ ಗಾಳಿ ಮಳೆ ಮಿಂಚುಗಳು ಸಿಡಿಲುಗಳು ||
ಧಾತ್ರಿ ಕಂಪಿಸೆ ನಹುಷ ವಿಸ್ಮಯ |
ತಾ ತಳೆದು ಬ್ರಹ್ಮಾಸ್ತ್ರ ಪಿಡಿಯಲ್ |
ಕಾ ತಪಸ್ವಿ ವಸಿಷ್ಠನಂತೈತಂದು ಪೇಳಿದನು || ೧ || 186 ||

**ಮಧುಮಾಧವಿ - ತ್ರಿವುಡೆ**
ಹೋ ಹೊ ಸೈರಿಸು ಸೈರಿಸೈ ನಿ |
ನ್ನಾಹವವ ಪರಿಕಿಸಿದೆ ಧರೆಯೊಳು |
ಸಾಹಸಕೆ ಎಣೆಯಿಲ್ಲ ನಿಶ್ಚಯ |
ವೀ ಹದನವನು ಲಾಲಿಸು || ೧ ||

ಧರೆಯೊಳೊಬ್ಬನಕೃತ್ಯ ಗೈದರೆ |
ನರಕಕೈದುವನವನ ನೋಡಲು |
ಬರುವುದಘವದರಿಂದ ಪೋಗುವ |
ಪರವನೀಕ್ಷಿಸು ಮನದಲಿ || ೨ ||

ಆರು ಜನರಿಹರರಿಗಳಲ್ಲದೆ |
ಬೇರೆ ಹುಂಡನು ಪುಂಡನಲ್ಲವ |
ದಾರಿಗಾರಪಕೃತಿಯ ಗೈವರು |
ಪಾರಮಾರ್ಥದಿ ಪುಡುಕಲು || ೩ ||

ಎರಗೆ ನಿಜವೆಂದನ್ನೆಗರಿತೈ |
ತರುತ ನಿಋುತಿಯು ತಡೆಯುತುಸುರಿದ |
ಅರಿಯು ಮಾಯಿಗ ಮೋಸಹೋಗದಿ |
ರರಿದು ಕೆಡಹೈ ಶಿರವನು || ೪ || 190 ||

**ಕಂದ ಪದ್ಯ**
ಕೋಣಪ ಕಪಟವಸಿಷ್ಠನ |
ಗೋಣೆತ್ತುತ ಪಿಡಿದು ಕೈಗಳನು ಮತ್ತೆಂದಂ ||
ಕಾಣೆಯ ಕ್ಷತ್ರಿಯನೆಂಬುದ |
ತ್ರಾಣದಿ ಸರಿಸಾಟಿ ಯುದ್ಧ ಗೈಯೆಂದೊದೆದಂ || ೧ || 191 ||

**ಮಾರವಿ - ಏಕ**
ಸಿಟ್ಟೊಳು ಹುಂಡನು | ಥಟ್ಟನೆ ನಿಋುತಿಗೆ |
ಇಷ್ಟೇತಕೆ ಎಂದ ||
ಭ್ರಷ್ಟನೆ ನೀ ಕುಲ | ಗೆಟ್ಟಿಹೆ ನಿಜ ಜಯ |
ಕೆಟ್ಟಿತು ನಿನ್ನಿಂದ || ೧ ||

ಇತ್ತ ನಹುಷ ಬ್ರ | ಹ್ಮಾಸ್ತ್ರವ ಬಿಡೆ ಖಲ |
ಧಾತ್ರಿಯೊಳೊರಗಿರಲು ||
ಕತ್ತಿಯನ್ನು ಮೇ | ಲೆತ್ತುತ ಚೀತರಿ |
ಸುತ್ತಲಿ ಮುಂಬರಲು || ೨ ||

ಖಡುಗವ ತುಂಡಿಸೆ | ಪೊಡೆದನು ಗದೆಯಿಂ |
ದಡಿಯಿಡದೊರಗಿದನು ||
ಕಡೆಗಾಲದಿ ಬಹ | ಮೃಡನಂತೇಳುತ |
ಪಿಡಿದನು ಚಕ್ರವನು || ೩ || 194 ||

**ಭಾಮಿನಿ**
ಚಕ್ರವನು ಪೂಜಿಸುತ ಧ್ಯಾನಿಸಿ |
ಚಕ್ರಧರನಂ ಗುರುವ ಸ್ಮರಿಸುತ |
ಶಕ್ರವೈರಿಯ ಮೇಲೆ ಬಿಟ್ಟಿಡೆ ನಹುಷ ತೆರಳುತಲಿ ||
ಫಕ್ಕನರಿದುದು ಕಂಠವನು ಚರ |
ರೊಕ್ಕಣಿಸಿದರು ವಿದ್ಯುತೆಗೆ ಬಂ |
ದಕ್ಕಟಾ ತೋರಿಸಿರೆನುತ್ತೈತಂದು ಮರುಗಿದಳು || ೧ || 195 ||

**ನೀಲಾಂಬರಿ - ಆದಿ**
ಕಾಂತ ನಿನ್ನ ಮೊಗವ ತೋರೊ |
ಎಂತು ಮರೆವೆ ನಿನ್ನ ||
ಕಂತುವಂತೆ ಪೊಳೆವ ದೇಹ |
ಎಂತು ಬಾಡಿತಕಟ || ೧ ||

ಹರಣಗೊಂಡೆಯಲ್ಲ ನೀನು |
ಹರುಷವಾಯಿತೇನೋ ||
ಹರನು ಮೆಚ್ಚಲುಂಟೆ ನಿನಗೆ |
ದೊರಕಲಹುದೆ ಸ್ವರವು || ೨ ||

ಪತಿಯ ಕೊಂದು ಕಳೆದೆಯಲ್ಲ |
ಸತಿಯಾದೆನ್ನ ಕೊಲದೇ ||
ಪತಿತನಾಗದಿರುವೆ ಪ್ರಿಯನ |
ಗತಿಗೆ ಕಳುಹಿಸೀಗ || ೩ || 198 ||

**ಕಂದ ಪದ್ಯ**
ಕೇಳುತ ಕರುಣದಿ ನಹುಷಂ |
ಪೇಳಿದ ಚಿಂತಿಸಿದರೈತಹನೆ ನಿನ್ನೊಡೆಯಂ ||
ಕಾಲದ ಗತಿಯನು ಮೀರಲು |
ಕಾಲನಿಗರಿದೆನ್ನನೇಕೆ ಜರೆಯುವಿ ವ್ಯರ್ಥಂ || ೧ || 199 ||

**ನವರೋಜು - ಏಕ**
ವಿದ್ಯುತೆ ಸೈರಿಸು ನೀನು | ಹತಿ |
ಸಿದ್ದುದನಂ ಬಿಡು ನಾನು ||
ಬುದ್ಧಿಯ ಪೇಳ್ವರು | ಮದ್ಯ ಕುಡುಕನವ |
ಯುದ್ಧದಿ ಬಿದ್ದಿಹ | ಬದ್ಧವಿದೀಕ್ಷಿಸು || ೧ ||

ಬಾಲಾಭ್ಯಾಸವು ಹಿರಿದು | ಆ |
ಮೇಲೊರೆಯೇ ಬರದೆಂದೂ ||
ಶೀಲ ನಡತೆ ವಿ | ದ್ಯಾ ಲಿಪಿ ನುಡಿ ಸ |
ಮ್ಮೇಳನದೇಳಿಗೆ | ಮೂಲವೆ ಮಾತೆಯು || ೨ ||

ಧರಿಸಿಹೆ ಗರ್ಭವನೆಲೆಗೆ | ಅವ |
ತರಿಸುವ ಬಾಲಕನಿಂಗೆ ||
ಪರಿಕಿಸಿ ಸತ್ಪಥ | ವರುಹುತ ಪಟ್ಟವ |
ವಿರಚಿಸಿ ಸುಖದಿಂ | ದಿರು ಪೋಗೆಂದನು || ೩ || 202 ||

**ವಾರ್ಧಕ**
ಪುರಕೆ ಮಿದುನುಡಿಯಿಂದಲವಳ ಕಳುಹಲು ಸುರರು |
ಪರಿಪರಿಯೊಳ್ ಪೊಗಳಿ ಸ್ವರಕೈದಿದರು ಪರ್ಣಮಂ |
ದಿರಕೆ ಬಂದೆರಗಿ ಪೇಳಿದ ನಡೆದ ಸಂಗತಿಯ ಹರುಷದಿಂದಪ್ಪಿ ಮುನಿಯು ||
ತರಳ ಮೆಚ್ಚಿದೆ ಮನೋಭೀಷ್ಟವೇನೆನಲೆಂದ |
ಗುರುವೆ ತಾಯ್ತಂದೆ ದರ್ಶನದ ಮನಮಿಹುದೆನಲ್ |
ಬರುತರುಂಧತಿಯಪ್ಪಿ ನೇವರಿಸಿ ಹರಸಿದಳ್ ಪೊರಟ ಋಷಿ ನಹುಷಸಹಿತ || ೧ || 203 ||

**ನಾದನಾಮಕ್ರಿಯೆ - ಅಷ್ಟ**
ಬಂದರೀರ್ವರು ಮಾಹಿಷ್ಮತಿಗೆ | ಚಾರ |
ನೆಂದನಾಯುಭೂಪನಿಂಗೆ ||
ತಂದೆ ವಸಿಷ್ಠಾಖ್ಯರಂತೆ | ಒಬ್ಬ |
ಕಂದನಿರುವರವರ ಪಿಂತೆ || ೧ ||

ಚರರ ಕಳುಹುತಾಯುಭೂಪ | ಪೋಗಿ |
ಕರೆತಂದರ್ಚಿಸೆ ಮೌನಿದೀಪ ||
ಒರೆದಂತೆ ಪಿತನ ಪಾದದಲಿ | ನಹುಷ |
ಶರಚಾಪವಿಟ್ಟ ಭಕ್ತಿಯಲಿ || ೨ ||

ಏನಿದಚ್ಚರಿ ಮೌನಿವರನೆ | ಎನ್ನ |
ಸೂನು ನಹುಷನೆಂಬನಿವನೆ ||
ಶ್ರೀನಿವಾಸನ ದಯೆಯಿಂದ | ಅಪ್ಪಿ |
ನಾನೆ ಧನ್ಯನು ಕಂಡೆನೆಂದ || ೩ ||

ಒಗೆದುದಾವೆಡೆ ಬೆಳೆದುದೆಲ್ಲಿ | ಎಂದು |
ದೃಗುಜಲವೊರೆಸಿದನಲ್ಲಿ ||
ಮಗನೆ ನಿರ್ಭಾಗ್ಯರೊಳ್ ಜನಿಸಿ | ಕಷ್ಟ |
ವಗಣಿತವೊದಗಿತೆ ಸಹಸಿ || ೪ ||

ಕಂದ ಭಾಷೆಯನಾಟಗಳನು | ನೋಡು |
ವಂದವಿಲ್ಲೆನಗೆಂದನವನು ||
ತಂದೆ ವಿಧಿಯು ಎಂದವ್ವೆಯನು | ನೋಡೆ |
ಬಂದಡಿಗೆರಗಿದನವನು || ೫ || 208 ||

**ಭಾಮಿನಿ**
ಎತ್ತಣಿಂದೈತಂದೆ ಮಗನೆಂ |
ದೆತ್ತಿದಳ್ಕೈದಣಿಯೆ ಚರಿತೆಯ |
ವಿಸ್ತರಿಸಿದನು ಕೇಳಿ ಮುನಿಗೆರಗಿದರು ವಿನಯದಲಿ ||
ಮತ್ತೆ ಸರ್ವರ ಹರಸುತಾಶ್ರಮ |
ದತ್ತ ತೆರಳಲು ಧರ್ಮ ಕರ್ಮಾ |
ಸಕ್ತಿಯಿಂ ಸುಖದಿಂದಲಿಹರೆಂದನು ಮುನಿವ್ರಜಕೆ || ೧ || 209 ||

**ಎರಡನೆ ಸಂಧಿ**

**ಕಂದ ಪದ್ಯ**
ಕೈಲಾಸದೊಳೊಂದಿನ ಹಿಮ |
ಶೈಲಾತ್ಮಜೆ  ಬಂದು ವಂದಿಸುತ ಹರನಡಿಗಂ ||
ಫಾಲಾಕ್ಷನೆ ವರದಾತನೆ |
ಪಾಲಿಸು ನನ್ನಿಷ್ಟವನ್ನು ಕರುಣದೊಳೀಗಂ || ೧ || 210 ||

**ಕೇದಾರಗೌಳ - ಅಷ್ಟ**
ನುಡಿಯನಾಲಿಸುತೆಡದ | ತೊಡೆಯನೇರಿಸುತಪ್ಪಿ |
ಮಡದಿ ರನ್ನಳೆ ಸಂತತ ||
ನಡೆಸಿಹೆ ಮುನ್ನ ಪೇ | ಳೊಡನೆ ಪೂರೈಸುವೆ |
ದೃಢ ಹಿಡಿ ನಂಬು ಮಾತ || ೧ || 211 ||

**ನವರೋಜು - ಏಕ**
ನಾಥನೆ ಬೇಸರ ಮನಕೆ | ಬಹು |
ಭೂತಗಳ ದರ್ಶನಕೆ ||
ಪ್ರೀತಿಯ ಸುಂದರ | ಜಾತರ ಕಾಣುವ |
ದೇತರದಿಂದೆಂ | ದಾತುರಳಾಗಿಹೆ || ೧ || 212 ||

**ಕೇದಾರಗೌಳ - ಅಷ್ಟ**
ಒಂದೆರಡಲ್ಲ ಮೂರ್ | ಮಂದಿ ಮಕ್ಕಳು ಕಣ್ಣ |
ಮುಂದೆ ಓಡಾಡುತಿರೆ ||
ಕಂದರ ಬಯಕೆ ಯಾ | ಕಿಂದು ಕಾಟವು ತಪ್ಪ |
ದೆಂದನು ನಗುತ ಹೀಗೆ || ೧ || 213 ||

**ನವರೋಜು - ಏಕ**
ದಂತಿಗ್ರೀವನು ಗಣಪ | ಸಮ  |
ಪಂಕ್ತೀಯಾನನದೀಪ ||
ದಂತದೀರ್ಘ ಕಾ | ಲಾಂತಕಸದೃಶ ಮ |
ಹಾಂತ ಕಾಯನಿವ | ನಿಂಥವರಲ್ಲವೆ || ೧ || 214 ||

**ಕೇದಾರಗೌಳ - ಅಷ್ಟ**
ನಾರಿಯಲ್ಲವೆ ಸಾವಿ | ರಾರಿದ್ದರಿನ್ನು ಕು |
ಮಾರರ ಯಾಚಿಸುವೆ ||
ಪಾರವಿಲ್ಲಾಸೆಗೆ | ನೀರೆ ಚಿಂತಿಸ ಬೇಡ |
ಮಾರಸುಂದರನನೀವೆ || ೧ || 215 ||

**ನವರೋಜು - ಏಕ**
ಗಂಡುಮಕ್ಕಳಿಗಿಂತ | ಮೇಲ್ |
ಕಂಡರೆ ಹೆಣ್ಣಿದು ಪಂಥ ||
ಖಂಡಪರಶು ಬ್ರ | ಹ್ಮಾಂಡವೆ ಪ್ರಕೃತಿಯೊ |
ಳಂಡಲೆವುದು ನಿಜ | ಕೊಂಡಾಡುವರೈ || ೧ || 216 ||

**ಕೇದಾರಗೌಳ - ಅಷ್ಟ**
ಕುಲವೃಕ್ಷ ಪುರುಷರಿಂ | ದಲಿ ಅಪ್ಪುದುತ್ತಮ |
ಫಲರೂಪ ಪುಂಜನ್ಮವು ||
ಕಲುಷಪುಂಜವು ಸ್ವಾರ್ಥ | ಕಲಹಕಾರಿಣಿಯರು |
ಲಲನೆ ಕೇಳ್ ಸ್ತ್ರೀಜನ್ಮವು || ೧ || 217 ||

**ನವರೋಜು - ಏಕ**
ಧರೆ ಜಲವೂ ಮೊದಲಾದ | ಅವ |
ತರಿಸುವ ಸುಸ್ಥಲವಾದ ||
ತರುಣಿಯರಿಂದು | ದ್ಧರವಾಗುವುದೈ |
ಎರಡನ್ವಯ ಸುಂ | ದರಿಯನು ಕರುಣಿಸು || ೧ || 218 ||

**ಭಾಮಿನಿ**
ಸುಂದರೇಶ್ವರನೀಶ್ವರಿಯನೊಡ |
ನಂದು ನಂದನವನವಿಹಾರ |
ಕ್ಕೆಂದು ಬಂದಲ್ಲಿರುವ ಸುಮನಸ ವಸ್ತುಗಳ  ತೋರಿ ||
ನಿಂದ ಸಾಲ್ಮರ ಪಾರಿಜಾತಕ |
ದಂದ ಕಲ್ಪವಶೋಕ ವರಹರಿ |
ಚಂದನವು ಸಂತಾನಮಿವು ಮನದಿಷ್ಟ ಸಲಿಸುವವು || ೧ || 219 ||

**ಶಂಕರಾಭರಣ - ತ್ರಿವುಡೆ**
ಮರವು ಮಗಳನು ಹೆರುವುದೆಂತಿದ |
ನರಿಯೆ ವಂಚಿಪುದೇತಕೆ ||
ಇರುವುದೇ ತ್ರೈಲೋಕಸೃಷ್ಟಿಯ |
ಚರಿತೆಯೊಳು ನಂಬುವುದಕೆ || ೧ ||

ಕಂಬದೊಳು ಹರಿಯುದಿಸಲಿಲ್ಲವೆ |
ನಂಬಿದರೆ ಫಲ ಸಿದ್ಧಿಯು ||
ಇಂಬುಗೊಡುತಲಶೋಕ ಕೊಡುವುದು |
ಸಾಂಬಶಿವಸಂಕಲ್ಪವು || ೨ ||

ಕನಕಪರ್ಣದಶೋಕ ಸುರಕುಜ |
ಮನಸಿಜನ ಶರವಾಗಲು ||
ಎನಗಲಂಕೃತ ಸುಂದರೀಮಣಿ |
ತನಯಳಂ ನೀಡೆಂದಳು || ३ || 222 ||

**ಭಾಮಿನಿ**
ಮರುತನಿಂ ತಲೆದೂಗುತಲಿ ಬೊ |
ಬ್ಬಿರಿದು ನಡುಮರವುಬ್ಬುತಾ ಕ್ಷಣ |
ಕರುಳಲೊಗೆದಳಶೋಕಸುಂದರಿ ದಿವ್ಯ ತೇಜದಲಿ ||
ಇರಲು ತರುವಕ್ಷತದಿ ಕುಣಿದೈ |
ತರುವ ಸರ್ವಾಭರಣಭೂಷಣ |
ಕಿರಣ ತರುಣಿಯನಪ್ಪಲೀರ್ವರಿಗೆಂದಳೆರಗುತಲಿ || ೧ || 223 ||

**ಸುರುಟಿ - ಏಕ**
ಸೃಷ್ಟಿಕರ್ತನೆನಗೆ | ನಿಮ್ಮಿಗ |
ಳಿಷ್ಟವೆನ್ನ ಗತಿಗೆ ||
ಶ್ರೇಷ್ಠವಹುದು ನಿ | ಮ್ಮೊಟ್ಟಿಗಿರುವೆನೆನ |
ಲಷ್ಟಮೂರ್ತಿ ಸಂ | ತುಷ್ಟಿಯೊಳೆಂದನು || ೧ ||

ಕರ್ಮಭೂಮಿಗಾಗಿ | ನಡೆ ದು |
ಷ್ಕರ್ಮ ನಿಲಿಸು ಪೋಗಿ ||
ಧರ್ಮ ಕೀರ್ತಿ ಸ | ತ್ಕರ್ಮಿ ನೃಪಗೆ ನೀ |
ಧರ್ಮಪತ್ನಿಯಹೆ | ನಿರ್ಮಲದಿಂದಿರು || ೨ ||

ಮಂಗಳೆಯೊಡನಾಗ | ತೆರಳಿದ |
ಗಂಗಾಧರ ಬೇಗ ||
ಗಂಗಾತಟದಿ ವಿ | ಹಂಗರಥನ ಪಾ |
ದಂಗಳ ತಪದಿಂ | ದಂಗನೆಯೀರ್ದಳು || ೩ || 226 ||

**ವಾರ್ಧಕ**
ಪೊತ್ತಿರುವ ಗರ್ಭದಿಂ ಚಿತ್ತಶಾಂತತೆಯಿಂದ |
ಪತ್ನನಕೆ ವಿದ್ಯುತೆಯು ಮತ್ತೆ ತೆರಳಿದಳೆಂದು |
ದುತ್ತಮಾಂಗದೊಳಿಹುದೆ ಪೆತ್ತಳರ್ಭಕನ ಪೆಸರಿತ್ತಳು ವಿಹುಂಡನೆಂದು ||
ಮುತ್ತಿಡುತ ಕುಶಲದಿಂದುತ್ತರಿಸೆ ಕೆಲವು ದಿನ |
ಬಿತ್ತರಿಸಬೇಕು ಸದ್ವೃತ್ತಿಯಂದಿರೆ ಬಂದ |
ಡಿತ್ತ ಶುಕ್ರಾಚಾರ್ಯ ಮಸ್ತಕವ ಚಾಚಿ ಬಳಿಕಿತ್ತು ಪೀಠವನೆಂದಳು || ೧ || 227 ||

**ಕೇದಾರಗೌಳ - ಅಷ್ಟ**
ಗುರುವೆ ವಿದ್ಯೆವಿಹೀನ | ರರು ಪಶುಸಮರವ |
ರಿರವು ಕಠಿಣ ಜಗದಿ ||
ಮರದಂತೆ ಬಾಳಿ ಸ | ರ್ವರಿಗು ಬೆದರಿ ಕಾಲ |
ಹರಣಮಪ್ಪುದು ಜನ್ಮದಿ || ೧ ||

ಬೆದರಬೇಡಾನಿಹೆ | ನಿದೆ ವಿದ್ಯಂಗಳನೆಲ್ಲ |
ಒದಗಿನಿಂ ಕಲಿಸುವೆನು ||
ಚದುರನ ಗೈಸಬೇ | ಕಿದು ಸಿದ್ಧ ಕಳುಹೆಂದು |
ಮುದದಿಂದ ಕರೆದೊಯ್ದನು || ೨ ||

ಸುತನಿಗೆಲ್ಲವ ಕಲಿ | ಸುತ ನಿಪುಣನ ಗೈದು |
ಸಿತ ವಿದ್ಯುತೆಯು ಸೇರಲು ||
ಹಿತದಿ ಪಟ್ಟವಗಟ್ಟೆ| ದಿತಿಜಸಂಕುಲವೆಸ |
ದತಿರಂಜಿಸಿತು ಸುತ್ತಲು || ೩ || 230 ||

**ದೇವಗಾಂಧಾರಿ - ಆದಿ**
ಪಾಹಿ ಮಾಂ ಶಂಕರ | ತ್ರೈಲೋಕಸುಖಂಕರ |
ಪಾಹಿ ಮಾಂ ಶಂಕರ || ಪ ||
ಪಾಹಿ ಪಾಹಿ ಭವವಾರವಿದೂರ |
ಪಾಹಿ ತ್ರಿಪುರಸಂಹಾರ ದಿಗಂಬರ || ಅ.ಪ ||
ಸುರಜಲಧರಶೀರ್ಷ | ಪಾಲಯ |
ಸ್ಮರಹರ ಸುರಪೋಷ ||
ಕರಧೃತ ಶೂಲ ಡ | ಮರು ಶಶಿಶೇಖರ |
ಉರಗಭೂಷ ಹಿಮ | ಗಿರಿನಂದಿನಿವರ || ೧ ||

ನೀಲಕಂಠ ನಿಗಮಾ | ಗಮನುತ |
ಫಾಲನಯನ ಭೀಮ ||
ಕಾಲಕಾಲಗಣ | ಪಾಲಕ ನಿರತ ಕ |
ಪಾಲಮಾಲ ಶಿವ | ಶೂಲಿ ಗಿರೀಶ || ೨ || 232 ||

**ಆರ್ಯಸವಾಯಿ - ಏಕ**
ಇನಿತುಸುರುತ ಸುರ | ಮುನಿ ಬರೆ ವಂದಿಸಿ |
ಕನಕಾಸನವಿಡುತರ್ಚಿಸಿದ ||
ಮಿನುಗುವ ನಗೆಯಿಂ | ದನುಜೇಶನ ಸುತ |
ನನು ಪೊಗಳುತ ನಾರದನೊರೆದ || ೧ || 233 ||

**ಸಾರಂಗ - ಅಷ್ಟ**
ಕೇಳು ವಿಹುಂಡ ನೀನು | ಎನ್ನಯ ಮನ |
ತಾಳಿತು ಮೋದವನು ||
ಕಾಳಾವತೀಪುರ | ವಾಳಿದ ಹುಂಡನು |
ಕಾಳಗದಲಿ ಸ್ವರ | ಕಾಳೆಸಗಿರುವನು || ೧ ||

ಮೂರು ಲೋಕದ ವೀರರು | ಬೆದರಿ ನಿಲ್ಲ |
ಲಾರದೆ ಓಡಿರ್ಪರು ||
ಕ್ರೂರ ಮನದೊಳೊಬ್ಬ | ಘೋರ ಬಂದು ಯಮ |
ನೂರಿಗಟ್ಟಿರುವನು | ಹಾರಿಸಿ ಶಿರವನು || ೨ ||

ಆರಾತನೆಂಬುದನು | ಪೇಳೆನಲೆಂದ |
ಧೀರ ನಹುಷನೆಂಬನು ||
ವೈರಿಯ ರಣದಿ ಸಂ | ಹಾರ ಮಾಡದೆ ಸಾವಿ |
ರಾರು ವರುಷವಿದ್ದ | ರಾರು ಪೊಗಳುವರು || ೩ ||

ಅರಿಯಲರಿಯದೆನಗೆ | ಇಂತೊರೆಯುವ |
ರಿರದೆ ಚಿಂತಿಸುವೆ ಹೀಗೆ ||
ಕರುಣದಿ ಪೇಳುತು | ದ್ಧರಿಸಿದರಹುದಿದು |
ಧುರಮನಮಿಹುದೆತ್ತ | ತೆರಳೆ ತಿಳಿಯದಿಹೆ || ೪ || 237 ||

**ಭಾಮಿನಿ**
ಸರಿ ನುಡಿದೆ ತಂದೆಯನು ಕೊಂದನ |
ತರಿಯದಿರಲಾತನಿಗೆ ಪುಟ್ಟಿದ |
ತರಳನಲ್ಲೆಂಬರು ಸಮಸ್ತರು ಯೋಚಿಸೆಂದೊರೆದು ||
ದುರುಳರಿರಬಾರದು ಜಗದಿ ಬಿ |
ತ್ತಿರುವೆ ಬೀಜವನೆನುತ ನಾರದ |
ತೆರಳಲಿತ್ತ ವಿಹುಂಡನವ್ವೆಯೊಳೊರೆದನಿಂತೆರಗಿ || ೧ || 238 ||

**ಸೌರಾಷ್ಟ್ರ - ಅಷ್ಟ**
ವಂದಿಸುವೆನು ಮಾತೆ | ಇಂದುಹರ ಸುಖ್ಯಾತೆ | ಅಮ್ಮ ಕೇಳು || ಎನ್ನ |
ತಂದೆಯ ತರಿದವ | ನಂದವ ಕೆಡಿಸುವೆ | ಅಮ್ಮ ಕೇಳು || ೧ ||

ಅರಿಯ ಸಂಹರಿಸದೆ | ಹರುಷದೊಳಿಪ್ಪುದೆ | ಮಾತೆ ಪೇಳು || ನೀನು |
ಅರುಹದೆನಗೆ ಹಿಂದೆ | ಬರಿದೆ ಮೌನದಿ ನಿಂದೆ | ಮಾತೆ ಪೇಳು || ೨ ||

ನಾರದ ಋಷಿ ಬಂದು | ವಾರತೆಯನು ತಂದು | ಪೇಳ್ದನಮ್ಮ || ಯುದ್ಧ |
ಪೂರಯಿಸಿ ಜಯ ಹೊಂದಿ | ಬಾರೆಂದು ಬೇಗದಿ | ಪೇಳ್ವುದಮ್ಮ || ೩ || 241 ||

**ಘಂಟಾರವ - ಝಂಪೆ**
ಬಿಡು ಮಗನೆ ಧುರವೇಕೆ | ಪೊಡವಿಪತಿಸುತ ನಹುಷ |
ನೊಡನೆ ಗೈಯದಿರರಿಯೆ | ಕಡು ಪರಾಕ್ರಮಿಯು ||
ಹಿಡಿಯದಿರು ಛಲ ಮುಂದೆ | ಕೆಡುವೆ ಸಾರಿದೆ ಬೇಡ |
ನಡುಗುವುದು ಮನ ಭಯವ | ಪಡೆದು ಮರುಗುವುದು || ೧ ||

ಬಿಳಿ ಕಾಗೆಯನು, ಮರಳಿ | ನೊಳು ತೈಲವನ್ನು, ಜಲ |
ದೊಳು ಮತ್ಸ್ಯಪದಚಿಹ್ನೆ | ತಿಳಿದೀಕ್ಷಿಸುವುದು ||
ಸುಲಭ ರವಿ ಶಶಿ ಗಮನ | ನಿಲಿಸಿದರು ನಹುಷನನು |
ಕೊಲುವುದಿದಸಾಧ್ಯ ಬಿಡು | ಕಲಹದುತ್ಸುಕವ || ೨ ||

ಉರಿಗಿರುವೆ ಮುತ್ತುವುದೆ | ಅರೆಗೆ ತಲೆ ಚಚ್ಚುವುದೆ |
ಗರಳಕೂಪದಿ ಮುಳುಗಿ | ಮರಳುವುದೆ ಬದುಕಿ ||
ಶರಧಿ ಬತ್ತಿಸಿದಂತೆ | ಧರೆಯ ತಿರುಗಿಸಿದೊಲಂ |
ಬರಕೇಣಿಯಿಟ್ಟಂತೆ | ವಿರಚಿಸದಿರಕಟ || ೩ ||

ತಂದೆಯನು ಗೆಲಿದವನು | ಕಂದ ನಿನ್ನನು ಜಯಿಸ |
ನೆಂದು ನಂಬುವುದೆಂತು | ಸಂದೇಹವಾಂತು ||
ವೃಂದಾರಕರ ಸಖಿಯ್ | ಹೊಂದಿಹನು ಸದ್ಗುಣಿ ವ |
ಸುಂಧರೆಯೊಳಿರಗೊಡನು | ಮುಂದೆ ಗತಿಯೇನು || ೪ || 245 ||

**ಕೇದಾರಗೌಳ - ಝಂಪೆ**
ಮಾತೆ ಬಿಡು ಚಿಂತೆಯನ್ನು | ವಿಧಿಗೆ ಪ್ರತಿ |
ಮಾತಿಹುದೆ ಭೋಗಕಿನ್ನು ||
ತಾತನಂ ಕೊಂದುದಕ್ಕೆ | ಎನ್ನಿಂದ |
ಲಾತ ಮೃತಿ ಹೊಂದನೇಕೆ || ೧ ||

ಆರಿಂದಲಾರಳಿವರು | ಜಗ ಜೀವ |
ವಾರ ಕರ್ಮಾಧೀನರು ||
ವೀರರೆಂದಿನಿಸಿ ಕಿರಿದು | ದಿನವಿಹುದೆ |
ಮೂರು ಲೋಕದಲಿ ಹಿರಿದು || ೨ ||

ಕೀರ್ತಿಯನು ಹೊಂದುವುದಕೆ | ಯತ್ನಿಪುದು |
ಸಾರ್ಥಕವು ಪುಟ್ಟಿದುದಕೆ ||
ಮೂರ್ತಿ ಕಿರಿದಾದರೇನು | ಕಳುಹಿ ಸಾ |
ಮರ್ಥ್ಯವನು ನೋಡು ನೀನು || ೩ ||

ಬೇಡಬೇಡೆಂದಳವಳು | ಸುತ ಕಾಡಿ |
ಬೇಡೆ ಕವಿಗಿದ ದೂರಲು ||
ಮಾಡೆಂದ ತಪ ವನದಲಿ | ಶಿವ ವರವ |
ನೀಡಲಭಯವು ಧುರದಲಿ || ೪ || 249 ||

**ಭಾಮಿನಿ**
ಶಾಂತ ಧೃತಿ ಮತಿ ದಾರ್ಢ್ಯ ನಿರ್ಭಯ |
ಪಂಥ ಬಲ ಹೆಚ್ಚುವುದು ದೇಹ |
ಭ್ರಾಂತಿ ತೊರೆದಾಜಿಗೆ ಸುಫಲವಿದು ಮುಂದೆ ತಪದಿಂದ ||
ಇಂತೆನಲು ಮಣಿದಡವಿಗೈದಿ ಕೃ |
ತಾಂತಕಾರಿಯನೇಕಚಿತ್ತದಿ |
ಚಿಂತಿಸಲು ಮೈದೋರೆ ಶಿವಗೆರಗುತ್ತಲಿಂತೆಂದ || ೧ || 250 ||

**ಆಹೇರಿ - ಆದಿ**
ಶಂಭು ಶಂಕರ ಪಾಲಿಸು | ನಿನ್ನಯ ಪಾದ |
ನಂಬಿಕೊಂಡಿಹೆ ಲಾಲಿಸು || ಪ ||
ಸಾಂಬಶಿವನೆ ಮಂತ್ರ | ದಂಬು ಖಡುಗ ಗದೆ |
ದಂಭೋಳಿ ಪರಶು ಮುದ್ಗರ ಕುಂತ ಶಕ್ತಿಯು || ೧ ||

ಶೂಲ ಚಕ್ರಗಳಿಂದಲಿ| ಸರ್ವಾಯುಧ |
ಮೂಲ ಪುಂ ಜನುಮದಲಿ ||
ಕಾಳಗದಲಿ ಸಾಯ | ದೋಲು ವರವ ನೀಡು |
ಫಾಲನಯನ ಚಂದ್ರ | ಮೌಳಿ ವರದ ಶಿವ || ೨ ||

ಕಷ್ಟವನನುಭವಿಸಿ | ನವಭಕ್ತಿಪಂಥ |
ನಿಷ್ಠೆಯಿಂದಲಿ ಭಜಿಸಿ ||
ತುಷ್ಟಿ ಗೈಸಿದ ಭಕ್ತ | ರಿಷ್ಟದಾಯಕನಹು |
ದಿಷ್ಟದಂತಾಗಲೆಂ | ದಷ್ಟಮೂರ್ತಿಯು ಪೋದ || ೩ || 253 ||

**ಕೇದಾರಗೌಳ - ಅಷ್ಟ**
ಪುರಕೆ ವಿಹುಂಡ ಬಂ | ದೆರಗಿ ವಿದ್ಯುತೆಗೆಂದ |
ಹರನಿತ್ತ ವರದಿಂದಲಿ ||
ಶರ ಶಸ್ತ್ರ ಪುರಷರಿಂ | ಮರಣವಿಲ್ಲನುಮಾನ |
ತೊರೆದು ಕಳುಹು ಧುರಕೆ || ೧ ||

ಮೊದಲಿಗನಾಗಬೇ | ಡದರಿಂದ ಧುರಯಜ್ಞ |
ತುದಿಗಾಣದನ್ಯರಿಂದ ||
ಕದನಕ್ಕೆ ಶತ್ರುವೈ | ದಿದರೆ ಕಳುಹುವೆನು |
ಸದನದೊಳಿರು ಸುಖದಿ || ೨ ||

ಬರಿದೆ ಹೆಸರು ದೊಡ್ಡ | ದರಸು ಸಚಿವ ಪೌರ |
ಪರಿವಾರದಿಷ್ಟದಂತೆ ||
ವಿರಚಿಪ ರಾಜಕಾ | ರ್ಯರು ಪೇಳಿದಂತಕ್ಕೆಂ |
ದೊರೆದನೋಲಗವ ಕೊಟ್ಟು || ೩ || 256 ||

**ಕಾಂಬೋಧಿ - ಝಂಪೆ**
ಕೇಳು ದುರ್ಮತಿ ತಪದಿ | ಕಾಲಗಲನಲಿ ವರವ |
ಕೇಳಿರುವೆ ಮಂತ್ರಾಸ್ತ್ರಮುಖದಿ ||
ಮೇಲೆ ಬ್ರಹ್ಮಾಂಬ್ವಶನಿ | ಶೂಲ ಖಡ್ಗದಿ ಪುರುಷ |
ಜಾಲದಿಂ ಮೃತಿಯಿಲ್ಲವೆಂದು || ೧ ||

ಬಂದವ್ವೆಯೊಳು ಪೇಳ್ದ | ಡೆಂದಳವಳಾಜಿ ಮನ |
ದಂದ ಬಿಟ್ಟಿರು ಕಣ್ಣ ಮುಂದೆ ||
ಇಂದು  ಯುದ್ಧೋಶನಹೆ | ಮುಂದೆ ಕ್ಷಯಿಸುವೆ ವೈರಿ |
ವೃಂದ ಬರಲೆಸಗು ಧುರವೆಂದು || ೨ ||

ಅರಿತಿಹೆನು ಮಾತೆ ನುಡಿ | ಗೆರಡೆಣಿಸಬಾರದೆಂ |
ದೊರೆದೀರ್ಪನುಶನಸನು ಹಿಂದೆ ||
ಹರನ ವರದಿಂದ ಬಲ | ಭರಿತನಾಗಿಹೆನಿದಕೆ |
ವಿರಚಿಸುವುದೇನೆಂದು ತಿಳುಹು || ೩ || 259 ||

**ಸೌರಾಷ್ಟ್ರ - ತ್ರಿವುಡೆ**
ಬಿಡು ಮನದ ಸಂಶಯವ ತಾಯಿಯ |
ನುಡಿಯು ಮೃಡನುಕ್ತಿಯೊಲು ನಿನ್ನ |
ನ್ನೆಡೆಬಿಡದೆ ನವಮಾಸ ಪೊತ್ತೆ | ತ್ತೊಡನೆ ಸಲಹಿ || ೧ ||

ಪ್ರೀತಿಸುತ್ತಿರಲಿಹಪರಕೆ ಸುಖ |
ದಾತೆಯಹುದದರಿಂದ ಸಂಗರ |
ದಾತುರವ ಬಿಟ್ಟಿರುವ ಮಾರ್ಗವೆ | ಸಾತಿಶಯವು || ೨ ||

ಗುರುವಿನಿಚ್ಛೆಯು ಮಂತ್ರಿ ಮತಿ ಹಡೆ |
ದಿರುವವಳ ಮನಸೆಲ್ಲವೊಂದಾ |
ಗಿರುವದಂತಾಗಲಿ ಎನುತ ಸು | ಸ್ಥಿರದೊಳಿಹನು || ೩ || 262 ||

**ಕುಸುಮ ಷಟ್ಪದಿ**
ಚಿತ್ರಶುದ್ಧರೆ ಕೇಳಿ | ರಿತ್ತಲು ವಿಹುಂಡ ಖಲ |
ವೃತ್ತದೊಳಗಾನಂದ | ವೆತ್ತಿರ್ದನು ||
ಅತ್ತ ಮಾಹೀಷ್ಮತೀ | ಪತ್ತನದಿ ವನಪಾಲ |
ಪೃಥ್ವೀಶನೊಡನಿಂತು | ಬಿತ್ತರಿಸಿದ || ೧ || 263 ||

**ಶಂಕರಾಭರಣ - ಮಟ್ಟೆ**
ಕೇಳು ಭೂಪತಿ | ಬಂದ | ಕೀಳು ಸಂಗತಿ || ಪ ||
ಹಾಳು ಖಗ | ಖೂಳ ಮೃಗ | ಬಾಳೀರ್ಪುವುದಗ || ಅ.ಪ ||
ಹಣ್ಣು ಹೂಗಳ | ಚುಚ್ಚಿ | ಮಣ್ಣಿಗವುಗಳ ||
ಮಿಣ್ಣನಿಕ್ಕಿ | ಸಣ್ಣ ಹಕ್ಕಿ | ಬಣ್ಣ ತರಿದಿಕ್ಕಿ || ೧ ||

ಎಂಡರ್ಮಕ್ಕಳು | ಶಾನೆ | ಕಂಡರ್ಬಲ್ ಗೋಳು ||
ಗೊಂಡು ಬಂದು | ಗಂಡನೆಂದು | ತಂಡ ಮರುಗಿದು || ೨ ||

ಬೇಡ ಬೇಡಿದು | ಎಂಗೆ | ಕಾಡ ಕಾಯ್ವುದು ||
ನಾಡಲಿಪ್ಪ | ರೂಢಿಯಪ್ಪ | ಕೇಡು ಸಾಕಪ್ಪ || ೩ || 266 ||

**ಭಾಮಿನಿ**
ಕೇಳಿ ಚರನಿಂಗಭಯವಿತ್ತು ಸು |
ಶೀಲನೊಳು ಬೇಟೆಗೆ ಕಿರಾತರ |
ಪಾಳೆಯವ ಕರೆಸೀಗಲೈದುವ ವಿಪಿನಕೆಂದೆನಲು ||
ಪೇಳಿದನು ಪಿತಗೆರಗಿ ನಹುಷನು |
ಮೇಲೆನಿಪ ವೃದ್ಧರು ತೆರಳ್ವರೆ |
ಬಾಲ ನಾನಿದ್ದೇನು ಫಲ ಕೊಡು ನೇಮವೆನಲೆಂದ || ೧ || 267 ||

**ಟುಮರಿ ಹಿಂದುಸ್ತಾನಿ - ರೂಪಕ**
ಬೇಡ ಮಗನೆ ಬೇಟೆ ಕಠಿಣ | ಕಾಡ ಚರಿಸಿ ಗೈವುದು || ಪ ||
ದಂತಿ ಸಿಂಹ ಶರಭ ವ್ಯಾಘ್ರ | ಸಂತತಿಗಳ ವ್ಯೂಹವು ||
ಚಿಂತೆಯುಳಿದು ಗೈದಿಹವು ನಿ | ಶಾಂತವನ್ನು ಸತತವು || ೧ ||

ಮೊದಲು ಹುಂಡನಿಂದ ದುಃಖ | ದುದಧಿಯಲ್ಲಿ ಮುಳುಗಿರೆ ||
ಚದುರ ನಿನ್ನ ನೋಡುತಧಿಕ | ಮುದವನಾಂತಿರೆ || ೨ || 269 ||

**ಮಾರವಿ - ಏಕ**
ಇಂಥಾ ಬಯಲ | ಭ್ರಾಂತಿಯನಾಂತಿರು |
ವಂಥಾ ತವ ಮತಿಗೆ ||
ಎಂತೊರೆಯುವೆ ಮೃಗ | ಸಂತತಿಯೊಡನಿಹೆ |
ಕಾಂತಾರದಿ ಹಿಂದೆ || ೧ || 270 ||

**ಭಾಮಿನಿ**
ಪರಧನ ಪರಸ್ತ್ರೀಸಮಾಗಮ |
ಪರರ ನಿಂದೆಯು ಕಠಿಣದುಕ್ತಿಯು |
ಸುರೆಗುಡಿಕತನ  ಜೂಜು ಬೇಟೆಯು ಸಪ್ತವ್ಯಸನಗಳು ||
ತರಳ ಕೇಳಿವುಗಳೊಳಗೊಂದಾ |
ಚರಿಪವಗೆ ದುಃಖಗಳು ತಪ್ಪುದೆ |
ಬರುವುದದರಿಂ ಪೋಪೆ ನಾನೆನಲೆಂದ ಯುವರಾಜ || ೧ || 271 ||

**ಮಾರವಿ - ಏಕ**
ಪರಿಭವವೊದಗಲು | ಪರಿಹರಿಸುವೆ ನೀ |
ಪರಿ ಸಂಶಯ ಕಳೆದು ||
ಪರಿ ಪಾಲಿಪುದನು | ಪರಿಜನ ಸಹಿತಲ |
ಪರಿಮಿತ ಮೃಗ ಕೊಲುವೆ || ೧ || 272 ||

**ಸೌರಾಷ್ಟ್ರ - ತ್ರಿವುಡೆ**
ತಾಪಸರು ನೀವ್ ಕೇಳಿರಾಯು |
ಭೂಪನಪ್ಪಣೆಯಿತ್ತು ಸುತನಿಂ |
ಗಾ ಪುಳಿಂದರ ಜೊತೆಗಮಾತ್ಯನೆ | ಪೋಪುದೆಂದ || ೧ ||

ಮಾತೆಗುಸುರಲ್ಕೆಂದಳವಳಕ |
ಟಾ ತೆರಳುವುದೆ ಹಂದಿ ಕಂಡರಿ |
ಗೋತು ಕಾರ್ಗಲ್ಕಂಡರಳುಕುವ | ಮಾತು ದಿಟವು || ೨ ||

ಕಂದ ಕುಂದಿದೆ ಹಿಂದೆ ಸ್ಮರಿಸಲು |
ಬಂದಪುದು ವ್ಯಥೆಯಂದವೇ ನೀ |
ನಿಂದಗಲುವುದು ಎಂದೆನಲ್ಕಿಂ | ತೆಂದನಂದು || ೩ || 275 ||

**ವಾರ್ಧಕ**
ಬರಿದೇತಕಿಂತೊರೆವೆ ಖಳನ ಕೈ ಸೇರಿರಲ್ |
ಪೊರೆದುದಾ ನಿರ್ಜರರ ದಯೆ ವಸಿಷ್ಠರ ಕರುಣೆ |
ಸುರರನುಗ್ರಹಮಿವುಗಳಿರಲೆಲ್ಲಿ ಪೋದರಾಂ ಭಯವಿಲ್ಲವಮ್ಮ ದಿಟವು ||
ಹರಸಿದಳ್ ಮಗನೆ ಮಂಗಲವಾಗಲ್ಕೆತಹುದು |
ತ್ವರಿತದಿಂದೆಂದು ಕಳುಹಲು ಸಚಿವನಿತ್ತ ಡಂ |
ಗುರ ಹೊಯ್ಸಿದಂ ಬೇಟೆಯೆಂದು ಕೇಳುತ ಕಿರಾತರು ಪೇಳ್ದರಿಂತು ಬಂದು || ೧ || 276 ||

**ದಿವಾಳಿ - ಏಕ**
ಸಲಾಮು ಸಾಮಿ ಆಯುಭೂಪತಿ |
ಸಲಾಮು ಸಲಾಂ ಜೀಯ || ರಾಯ || ಸಲಾಮು || ಪ ||
ಈಟು ಕಿರಾತರ | ಕೂಟವ ಕೂಡಿ ||
ಕಾಟಕ ಮಿಗಗಳ | ಬೇಟೆಯ ಮಾಡಿ ||
ನಾಟಿಸುತೆಮ್ಮಳ | ಈಟಿಯನವುಗಳ |
ಓಟನೆ ನಿಲಿಸುವೆ ನೋಡಿ | ಬುದ್ಧಿ || ೧ ||

ಸಳ್ಳೊಳು ಪಳ್ಗಳ | ಡೊಳ್ಳನೆ ಬಗೆದು ||
ಕಳ್ಳ ಸುರಿಸುವೆವು | ಕೊಳ್ಳನೆ ಮುರಿದು ||
ಟೊಳ್ಳು ನುಡಿಯೆವೀ | ಗೊಳ್ಳೆ ಹುರುಪು ಮನ |
ವಳ್ಳುತಿಹುದು ನಮಗಿಂದು | ದ್ಯಾವ್ರೆ || ೨ || 278 ||

**ಕಂದ ಪದ್ಯ**

ಮೃಗಯಾಜೀವಿಗಳಿಗೆ ಮಿಗೆ |
ಮಗನ ಸಹಿತಲಲ್ಲಮಾತ್ಯನಂ ಕಳುಹೆ ಪೊರಟರ್ ||
ಅಗಣಿತ ಹಯ ಗಜ ರಥದಿಂ |
ದಗ ಗಹ್ವರವನವ ಶೋಧಿಸುತ ಗರ್ಜಿಸುತಂ || ೧ || 279 ||

**ಮುಖಾರಿ - ಏಕ**

ಬೇಟೆಯಾಡುತ್ತಲಿರ್ದ ನಹುಷ | ತಂಡೋಪತಂಡದಿ |
ಬೇಟೆಯಾಡುತ್ತಲಿರ್ದ ನಹುಷ || 1 || 280 ||

**ಭಾಮಿನಿ**

ಧಾರಿಣೀಸುರರಾಲಿಪುದು ಋಷಿ |
ನಾರದಾಂಕನು ಯೋಚಿಸುತ ಖಳ |
ವಾರವಳಿಸಲು ಶುಕ್ರ ಬಿಡನಿದಕೊಂದುಪಾಯವನು ||
ನಾ ರಚಿಸುವೆ ವಿಹುಂಡನಲ್ಲೆನು |
ತಾ ರಮೇಶಾಪ್ತನ ಭಜಿಸಿ ಬರೆ |
ದೂರದಿಂ ಕಂಡಾಸನವನಿತ್ತುಪಚರಿಸಲಿಂತೆಂದ || ೧ || 281 ||

**ಮಿಶ್ರಕಾಂಬೋಧಿ - ಅಷ್ಟ**

ಕೇಳು ವಿಹುಂಡ ನಾ ಪೇಳುವುದನ್ನು ||
ತಾಳದಿರಿನ್ನು ಮನದಿ ಸಂಶಯವನು || ಪ ||
ಈರೇಳು ಲೋಕ ಸಂಚರಿಸುತ್ತ ಸುರನರ |
ವಾರವ ಶೋಧಿಸೆ ನಿನ್ನ ಪೋಲುವ ವೀರ |
ಧೀರರ ನಾ ಕಾಣೆನು || ಈ ನಗರದ |
ಭೂರಿ ಸಂಪತ್ತಿಗಿನ್ನು || ನೋಡಿದರೀಗ |
ಕಾರಣಪುರುಷ ನೀನು || ರೂಪಕೆ ಎಣೆ |
ಗಾರರಿಲ್ಲವು ಹಿಂದೆ | ಮಾರನಳಿದನೆಂದೆ || ೧ ||

ಏನಾದರೇನು ಯೌವನದೈಶ್ವರ್ಯಕೆ ವ್ಯರ್ಥ |
ಕ್ಷೀಣತ್ವವನು ಗೈದೆ ಇದರಿಂದ ದೊರಕುವ |
ದೇನೆಂದು ತಿಳುಹು ಸ್ವಾರ್ಥ || ಒಂದೆಡೆಯಿಹ |
ಮಾನಿನಿಯನ್ನು ವ್ಯರ್ಥ || ತಂದರೆ ಮತ್ತೆ |
ಕಾಣೆ ಮಾಡುವೆ ಅನರ್ಥ || ಬೆಸಗೆಗಾರ |
ನಾನೆಂಬರೇಕಯ್ಯ | ನೀನಿಕ್ಕುವುದು ಕೈಯ || ೨ ||

ಬೆಳ್ಳಿಬೆಟ್ಟದೊಳುಮೆಯೆಂದಳೀಶನೊಳಿಂತು |
ವಲ್ಲಭನೆಮಗಿಪ್ಪ ವೀರಪುತ್ರರು ಮೂವ |
ರಲ್ಲದುಭಯ ವಂಶವ || ಪಾವನ ಗೈವ |
ಡಿಲ್ಲ ಪುತ್ರಿಯ ಪಡೆವ || ಎಂತೆನಲೆಂದ |
ಚೆಲ್ವ ಅಶೋಕ ತರುವ || ಸೇರುತ ಕೇಳಿ |
ದಲ್ಲಿ ಪುಟ್ಟುವಳಿದ | ರಲ್ಲಿಲ್ಲನೃತವೆಂದ || ೩ ||

ಗಿರಿಜೆ ಪೊರಟು ನಾಥನೊಡನುದ್ಯಾನದಿ ದೇವ |
ತರುವಾದಶೋಕವೀಕ್ಷಿಸುತಲಿಷ್ಟಾರ್ಥವ |
ಕರುಣಿಪುದೆನಲು ದೇವ || ಪುಟ್ಟಲಿ ದಿವ್ಯ |
ತರುಣಿಯೆಂದುಸುರಲ್ಕವ || ತರಿಸೆ ವೃಕ್ಷೋ |
ದರದಿಂದವಳ ಪೋಲುವ || ರಿಲ್ಲವಳೀಗ |
ಸುರಗಂಗಾತಟದಲ್ಲಿ | ಇರುವಳು ತಪದಲ್ಲಿ || ೪ ||

ಅಂಡಜೋದ್ಭಿಜ ಸ್ವೇದಜಾತಜರಾಯುಜ |
ಗೊಂಡು ಪುಟ್ಟಿಹ ಪಾಪ ಭಾಂಡದ ಬಲೆ ಸೇರಿ |
ಕೊಂಡಿರಬೇಡವಪ್ಪ || ನಿನಗೆ ತಕ್ಕ |
ಪುಂಡರೀಕಾಕ್ಷಿಯಿಪ್ಪ || ಆ ತೆರ ಪೋಗಿ |
ಕಂಡರೆ ನಿನಗೆ ತಪ್ಪ || ದಪ್ಪುದು ಮುಕ್ತಿ |
ಖಂಡಿತ ನಿನಗುಂಟು | ಕಂಡರವಳೆ ಗಂಟು || ೫ || 286 ||

**ಕಂದ ಪದ್ಯ**
ಸುಮನಸಋಷಿಯಿಂತುಸುರಲು |
ಸುಮಶರಕಂಗಂ ಸಮರ್ಪಿಸುತುಸುರಿದನವನೊಳ್ ||
ಸುಮನಸ ಸತಿ ಸಿಗುವಳು ದಿಟ |
ಸುಮಶರನರಿಯನ್ನು ಕಂಡೆ ನಿಮ್ಮಿಂದಾಗಳ್ || ೧ || 287 ||

**ಖಮಾಚ್ - ಏಕ**
ಗೀರ್ವಾಣರ್ಷಿಯೆ ಕೃತಾರ್ಥ ನಾಂ || ಪ ||
ಪೂರ್ವದ ಪುಣ್ಯವ | ಪೂರ್ವದಿ ಫಲಿಸಿರೆ || ಅ.ಪ ||
ಚತುರಾಶ್ರಮದೊಳು | ಅತಿಥಿಸತ್ಕಾರಕೆ |
ಅತಿಶಯವಿದು ದಿಟ | ಪ್ರತಿಯಿಲ್ಲವು ವಿಧಿ || ೧ ||

ಹವಿಯಿಲ್ಲದ ಕ್ರತು | ರವಿಯಿಲ್ಲದ ನಭ |
ಕವಿಯಿಲ್ಲದ ಸಭೆ | ಬುವಿಯೊಳು ನಿಂದ್ಯವು || ೨ ||

ಇದರಂತೆಯೆ ನಾ | ಸುದತಿಯ ತರದಿರೆ |
ಮುದಮಿಲ್ಲವು ಸುರ | ನದಿತಟಕೈದುವೆ || ೩ || 290 ||

**ಭಾಮಿನಿ**
ಇಂತೆನಲು ವಿಧಿಸೂನು ನಿಜ ನಿಜ |
ಕಾಂತೆಯಂ ತರದುಳಿಯಬೇಡೆಂ |
ದಂತರಿಕ್ಷವ ಸಾರೆ ಮಾತೆಯೊಳೆಂದನೈತಂದು ||
ಕಂತುಪಿತಸುತಸೂನು ಲಗ್ನ |
ಕ್ಕಂ ತರಳೆಯಿಹಳೆಂದ ತಹೆ ನಾ |
ಸಂತಸದಿ ಶುಭಕಾರ್ಯಕಪ್ಪಣೆ ನೀಡುವುದು ಹರಸಿ || ೧ || 291 ||

**ಕೇದಾರಗೌಳ - ಅಷ್ಟ**
ಪರಿಣಯದರ್ಥಿಯ | ಪರಿಕಿಸುವೆನು ಮುಂದೆ |
ಸರಿಯಾದರ್ಧಾಂಗಿಯನು ||
ತರಳನೆ ಪುಡುಕಿಸಿ | ವಿರಚಿಪೆ ಮದುವೆಯ |
ಬರಿದೆ ದುಡುಕದಿರಿನ್ನು || ೧ || 292 ||

**ಕೇದಾರಗೌಳ - ಝಂಪೆ**
ನಿನಗೊಪ್ಪುವವಳ ತಂದು | ವೈವಾಹ |
ವೆನಗೇಕೆ ಗೈವುದೆಂದು ||
ಮನಕರಿಯದೋರ್ವಳಿಹಳು | ಗಂಗೆ ತಟ |
ವನು ಸೇರಿ ತಹೆನೀಗಳು || ೧ || 293 ||

**ಕೇದಾರಗೌಳ - ಅಷ್ಟ**
ನಿನ್ನ ಮನಕೆ ಬಹ | ಕನ್ಯಾಮಣಿಯ ಲಗ್ನ |
ವನ್ನು ಮಾಡಿಸುವೆನಯ್ಯ ||
ಅನ್ಯರಿಗೊಲಿದವ | ಳನ್ನು ನೀ ತರಬೇಡ |
ಭಿನ್ನಗೈಯದಿರ್ ಬುದ್ಧಿಯ || ೧ || 294 ||

**ಕೇದಾರಗೌಳ - ಝಂಪೆ**
ಯೋಗಿ ಪೇಳಿಹ ವಧುವಿಗೆ | ವೈವಾಹ |
ವಾಗಲಿಲ್ಲನ್ಯರಿಂಗೆ ||
ಹೇಗೆ ಒಲಿದವಳಾಹಳು | ಪುಡುಕುವುದ |
ಕೀಗದಕೆ ಕೊರತೆ ಪೇಳು || ೧ || 295 ||

**ಕೇದಾರಗೌಳ - ಅಷ್ಟ**
ಕೊರತೆ ಪೇಳಲು ಹಿಂದೆ | ಪರಿಕಿಸಿರ್ಪೆನು ಮುಂದೆ |
ಎರಕದಿಂದಿದ್ದೊರೆವೆ ||
ಇರಲಿ ಜಾಗ್ರತೆ ಸೊಕ್ಕಿ | ಕರವಿಕ್ಕದಿರು ಶೌರ್ಯ |
ಮೆರಸದಿರ್ ಕೇಡದುವೆ || ೧ || 296 ||

**ಕೇದಾರಗೌಳ - ಝಂಪೆ**
ಕಂಡು ನೀನೊರೆವಂತೆಯೆ | ಪೋಗಿ ನಾ |
ಕಂಡು ತಿಳಿವೆನು ಮಾತೆಯೆ ||
ಖಂಡಪರಶುವ ದಯೆಯಲಿ | ಕಾರ್ಯ ಜಯ |
ಖಂಡಿತದೊಳಹುದಿಂದಿಲಿ || ೧ || 297 ||

**ವಾರ್ಧಕ**
ನೀಲಕಂಠನ ಮರೆಯದ್ಯೆದೆಂದು ಕಳುಹಲ್ಕೆ |
ನೀಲಮಣಿ ಮುಕ್ತಾದಿ ಹೀರಹಾರವ ಧರಿಸಿ |
ನೀಲದೂರ್ಮಿಕೆ ಸ್ವರ್ಣ ವಸನ ಪೂಗಂಧವಂ ನೀಲಕುಂತಳೆಗೆನ್ನುತ ||
ನೀಲಾಕ್ಷನೆಂಬ ಸಚಿವೇಶನಿಂ ತರಿಸುತ್ತ |
ನೀಲಾಭ್ರ ರಜ ಮುಸುಕುವೊಲು ನಡೆದ ಸಂಭ್ರಮದಿ |
ನೀಲಾಭ್ರವಾಹ ಬೆರಗಾಗೆ ಇದಿರಾದುದದು ನೀಲಮುಖ ಮಾರ್ಜಾಲವು || ೧ || 298 ||

**ಶಂಕರಾಭರಣ - ತ್ರಿವುಡೆ**
ಕೊಂದದನು ಮುಂದ್ಯೆತರಲು ಕಪಿ |
ಯೊಂದು ಪಲ್ಗಿರಿದೋಡೆ ಮ್ಲೇಚ್ಛನು |
ಚಂದದಿಂ ಚರ್ಮವನು **ಪೊತ್ತೈ** |
ತಂದು ವಂದಿಸಿ ತೆರಳಿದ || ೧ ||

ಬರುತಿರಲು ತೈಲವನು ತಕ್ರವ |
ಧರಿಸಿ ಗಾಣಿಗ ದಂಪತಿಗಳಿ |
ತ್ವರಗಿ ಪೋದರು ವಿಪ್ರ ಕುಶ-ತಿಲ |
ಕರದಿ ಪಿಡಿದುದ ಕಂಡನು || ೨ ||

ಪರಿಗೆ ಸಂಶಯ ಮಾನಸದಿ ಮುಂ |
ಬರೆ ವಿಧವೆ ದುಃಖಿಪುದ ನೋಡಿದ |
ಬರಿಯ ಕೊಡ ಪಿಡಿದಂಗಹೀನನ |
ಜರೆದು ನದಿತಟ ಸೇರಿದ || ೩ || 301 ||

**ಶಂಕರಾಭರಣ - ಅಷ್ಟ**
ಕಂಡನು | ನದಿಯ ಇಬ್ಬದಿಯನ್ನು | ಕಂಡನು || ಪ ||
ಕಂಡನು ಹಸುರಂಬರವನು | ಉಟ್ಟು |
ಕೊಂಡಂತೆ ಗುಲ್ಮಚ್ಛಾಯೆಯನು ||
ಪುಂಡರೀಕೋದ್ಭವ| ಪುಂಡರೀಕೋದರ |
ಖಂಡಪರಶು ರೂಪು | ಗೊಂಡ ಜಾಹ್ನವಿಯನ್ನು || ಅ.ಪ ||
ನದಿಯನೀಕ್ಷಿಸೆ ಬಂದುದಲ್ಲ | ದಿವ್ಯ |
ಸುದತಿ ರನ್ನಳ ಕಂಡುದಿಲ್ಲ || ಎಂದು |
ಚದುರರೊಳೊರೆದ ನೀವೆಲ್ಲ || ಮೊತ್ತ |
ಮೊದಲು ತೋರುವೆನೆಂದುದೆಲ್ಲ || ಯಾವ |
ಬದಿಯ ಸೇರಿತೊ ಕಾಣೆ | ನಿದುವೆ ಶೋಧಿಪೆನೆಂದು |
ಮುದದಿ ಸಂಚರಿಸುತ್ತ | ವಿಧುವಾನನೆಯನೀತ |
ಕಂಡನು || ಪೇಳಿದನು ವಿ | ಹುಂಡನು || ೧ || 302 ||

**ಭಾಮಿನಿ**
ನಾರಿ ಬಲು ಶೃಂಗಾರಿ ಮದನಕ |
ಠಾರಿ ರತಿಗನುಕಾರಿ ಪರಿಕಿಸೆ |
ವಾರಿಜಾಂಬಕಿ ಸಾರಿ ಮದವುಕ್ಕೇರಿ ಬರುತಿಹುದು ||
ಭೂರಿ ಕಾಂತಿಯ ಬೀರಿ ಮೆರೆವಳ |
ಸೇರಿ ಕುಚಗಿರಿಯೇರಿ ಪಲ್ಲವ |
ಪೀರಿ ಸ್ಮರಹತಿ ತೂರಿ ಸುಖಿಸುವ ದಾರಿಗ್ಯೆಯುವೆನು || ೧ || 303 ||

**ಇಂಗ್ಲಿಷ್ ನೋಟ್ - ಏಕ**
ನೋಡಿತ್ತ ಕಣ್‌ತೆರೆ | ದಾಡುತ್ತ ಮಾತೆರ |
ಡಾಡೆತ್ತಗಲಲಾರೆ | ನಾ ನಿನ್ನ || ಪ ||
ಕೂಡೆಲೆ | ಮುತ್ತ | ನೀಡೆಲೆ || ಅ.ಪ |
ಮುದ್ದು ತಪದಲೇತ | ಕಿದ್ದು ಬಳಲುವುದು |
ಶುದ್ಧ ಮೌನಿಯ ಹಾಗೆ | ನೀನೀಗ ||
ನಿದ್ರೆಯೇ | ಛೀ | ಬುದ್ಧಿಯೇ || ೧ ||

ಗಂಧ ಕಸ್ತೂರಿ ರನ್ನ | ಸ್ಯಂದನದೊಳು ಚಿನ್ನ |
ತಂದಿರ್ಪೆ ನಿನಗೀಗ | ಕೇಳ್ ಕೇಳ್ ಕೇಳ್ ||
ಇಂದಿದೇನ್ | ಮೊಗ ಕಂದಿದೇ || ೨ ||

ಬಾರೆ ಚಂದಿರಮುಖಿ | ಮಾರಸಂಗರಸಖಿ |
ನೀರೆ ಕೋಮಲ ಕೈಯ | ತಾ ತಾ ತಾ ||
ಧೀರ ನಾ | ಶಂಗಾರೆ ನೀ || ೩ ||

ಬತ್ತಿ ಪೋಪುದು ಜಿಹ್ವೆ | ವೃತ್ತಕುಚಗಳೆದೆ |
ಗೊತ್ತುವಧರಸುಧೆ || ನೀಡ್ ನೀಡ್ ನೀಡ್ ||
ಚಿತ್ತವೇ | ನು | ನೃತ್ತವೇ || ೪ ||

ಮಾತಾಡದೀರ್ದರೆ | ನಾ ತಾಪತಾಳಲಾರೆ |
ಚೇತೋಜ ಕುಣಿಸುವ | ಬಾ ಬಾ ಬಾ ||
ಪ್ರೀತೆಯೇ | ಸುಖ | ದಾತೆಯೇ || ೫ ||

ಅಪ್ಪಿ ಮುದ್ದಾಡುವೆ | ಒಪ್ಪು ನಾ ಕೂಡುವೆ |
ತಪ್ಪಿಕೊಳಲು ಬಿಡೆ || ತಾಳ್ ತಾಳ್ ತಾಳ್ ||
ತಪ್ಪಿದೇ | ಮುಂ | ಬಪ್ಪುದೇ || ೬ || 309 ||

**ಭಾಮಿನಿ**
ಘೋರದನುಜ ವಿಕಾರರೂಪನೆ |
ಚೋರ ನಿಲ್ಲೆಲೊ ದೂರ ಬಿಡುಬಿಡು |
ಕ್ರೂರ ಕೃತ್ಯದ ವಾರ ಸತ್ಯಕೆ ಸೇರದನವರತ ||
ಮಾರನಿಗೆ ನೀ ಚಾರನಾಗುತ |
ನಾರಕದೊಳಿದ್ದಾರ ಬೇಡಲು |
ದೂರ ಮನ್ನಿಪ ಶೂರರರಿಯೆನು ಪಾರಮಾರ್ಥವಿದು || ೧ || 310 ||

**ಕಲ್ಯಾಣಿ - ಅಷ್ಟ**
ಜರೆವುದೇತಕೆ ಇಂತು ಪೇಳು | ಎನ್ನ |
ಪರಿಯ ವಿಸ್ತರಿಸುವೆ ಮನಗೊಟ್ಟು ಕೇಳು ||
ನರಕದೊಳಿರಲನ್ಯಾಯವನು | ಗೈಯ |
ದಿರಲೆಂತದಪ್ಪುದು ಬಿಡು ಮಾತ ನೀನು || ೧ || 311 ||

**ಭೈರವಿ - ಮಟ್ಟೆ**
ಎನ್ನೊಳಾಸೆಯ | ಗೈಯಬೇಡವು |
ಮುನ್ನ ಪೇಳಿದ | ಮಾತಧರ್ಮವು ||
ನಿನ್ನ ರೀತಿಯ | ಅರಿತೆ ಸುಮ್ಮನೆ |
ಕುನ್ನಿ ಪೋಗೆಲ | ಹಿಂದೆ ಘಮ್ಮನೆ || ೧ || 312 ||

**ಕಲ್ಯಾಣಿ - ಅಷ್ಟ**
ವನಿತೆ ಕಾಳಾವತಿಯರಸ | ವಿಹುಂ |
ಡನು ಎಂಬ ಪೆಸರನಾಂತಿರುವೆನು ಸರಸ ||
ವನು ತಾಳಿ ಬಪ್ಪುದೆ ಸುಖವು | ಅಲ್ಲ |
ದನುದಿನ ಪಟ್ಟದರಸಿಯಪ್ಪೆ ನಿಜವು || ೧ || 313 ||

**ಭೈರವಿ - ಮಟ್ಟೆ**
ಬೇಡ ಪಟ್ಟವು | ಕಾಡೆ ಸೌಖ್ಯವು |
ಕಾಡಬೇಡವು | ಗಾಢ ದುಃಖವು ||
ನೋಡೆ ತಪ್ಪದು | ನೋಡೆ ನೀನದ |
ಮೂಢ ಪಾಪಿಯ | ನೋಡೆ ನಿಶ್ಚಯ || ೧ || 314 ||

**ಕಲ್ಯಾಣಿ - ಅಷ್ಟ**
ಸರಸಿಜಾನನೆ ಕುಂದರದನೆ | ಎನ್ನ |
ಪರಿಕಿಸುತಪ್ಪಿ ಮುದ್ದಿಸು ಹಸ್ತಿಗಮನೆ ||
ಸ್ಮರಜ್ವರಹರೆ ದಿವ್ಯಾಕಾರೆ | ವ್ಯರ್ಥ |
ಜರೆದಳಲಿಸಬೇಡ ಕ್ರೀಡಿಸೆ ಬಾರೆ || ೧ || 315 ||

**ಭೈರವಿ - ಮಟ್ಟೆ**
ಬರಿದೆ ಸಾವುದೇ | ಹರುಷಮಪ್ಪುದೇ |
ಕುರಿಹರಾಗವ| ಬಯಸೆ ಸಿಗುವುದೆ ||
ಪರಮಧಾರ್ಮಿಕ | ನೆಂದು ಕೊಳ್ಳುವೆ |
ಸರಿ ಹಗಲಿನೊಳು | ಕೂಡಲೊರೆಯುವೆ || ೧ || 316 ||

**ಕಲ್ಯಾಣಿ - ಅಷ್ಟ**
ಏತಕಿಂತನೃತವ ನುಡಿವೆ | ಮಧ್ಯ |
ರಾತ್ರಿಯೊಳಿದ್ದಿಲ್ಲಿಗೈತಂದೆನಿದುವೆ ||
ನೀ ತಳ್ಕಿಸದಿರಲ್ಕೆ ಸ್ಮರನ | ಬಾಣ |
ಘಾತದಿಂದೊರೆದಂತೆ ಕ್ಷಣ ನಿಲ್ಲ ಪ್ರಾಣ || ೧ || 317 ||

**ಶಂಕರಾಭರಣ - ಮಟ್ಟೆ**
ಪೋಗು ಪೋಗು ಪೋಗು ಪೋಗು |
ಪೋಗು ಪೋಗೆಲ ||
ಯೋಗಿಯರಸಿಗಾಗಿ ಮಘವ |
ಭೋಗಿಯಾಗಿ ಹೋಗಿ ಶಾಪ |
ತಾಗಿ ಯೋನಿಯಾಗಿ ದೇಹ | ನೀಗಿಕೊಂಡನು || ೧ || 318 ||

**ಕೇದಾರಗೌಳ - ಝಂಪೆ**
ನೀತಿಹರ ವೃದ್ಧಶ್ರವ | ಶಚಿ ಸಾಲ |
ದಾತ ಸೂಳೆಯರ ಕಾವ ||
ಘಾತಕಂಗೆನಗು ಸರಿಯೆ | ಸತಿಯಿಲ್ಲ |
ದೈತ್ಯರಲು ಬಿಡುವೆ ಸರಿಯೆ || ೧ || 319 ||

**ಶಂಕರಾಭರಣ - ಮಟ್ಟೆ**
ಶಾರದೆಯನು ಕೂಡಿ ಬ್ರಹ್ಮ |
ಮೂರು ಎರಡು ತಲೆಗಳಲ್ಲಿ |
ವಾರಿಧರನಿಗಿತ್ತನೊಂದ | ನಾರು  ಕಾಯ್ವರು || ೧ || 320 ||

**ಕೇದಾರಗೌಳ - ಝಂಪೆ**
ತನ್ನ ಮಗಳಂ ಕೂಡಿದ | ಅಧಮವಿಧಿ |
ಮುನ್ನ ಶಿಕ್ಷೆಯ ತಾಳಿದ ||
ರನ್ನೆ ಸುತೆ ಭಗಿನಿಯಲಲ್ | ಭವಭಯಗ |
ಳೆನ್ನ ಬಾಧಿಸುವುದಿಲ್ಲ || ೧ || 321 ||

**ಶಂಕರಾಭರಣ - ಮಟ್ಟೆ**
ಹರಿ ಜಲಂಧರನೊಲು ಬೃಂದೆ |
ಬೆರೆತು ಹತ್ತು ಜನ್ಮ ತಳೆದು |
ಧರೆಯೊಳಲೆದು ಶಿಲೆಯದಾಯ್ತು | ಪರಿಯನರಿತುಕೊ || ೧ || 322 ||

**ಕೇದಾರಗೌಳ - ಝಂಪೆ**
ಸುಡು ಕ್ರೂರ ಕಪಟಿ ಮಾತ | ಕ್ಷಣಕೊಂದ |
ನುಡಿವ ಬಹುರೂಪದಾತ ||
ಕಡು ಖೂಳ ನಂಬಬಹುದೆ | ನಿಜರೂಪ |
ದೊಡನೊರೆವೆನೆಂದು ಬಂದೆ || ೧ || 323 ||

**ಶಂಕರಾಭರಣ - ಮಟ್ಟೆ**
ಹರನಗಸ್ತ್ಯನರಸಿ ಬಯಸಿ |
ಪರಮಲಿಂಗ ಕಳಚಿ ಬೀಳೆ |
ಧರೆಗೆ ಪೂಜಿಸುವರು ಲೋಪಾ | ಮುದ್ರೆಯಿಂದಲಿ || ೧ || 324 ||

**ಕೇದಾರಗೌಳ - ಝಂಪೆ**
ಖರನಂತೆ ಮೇಧ್ರು ಬೆಳೆಸಿ | ಪೋಗಲವ |
ಳರಿತು ಹೇಸುತ್ತ ಶಪಿಸಿ ||
ತರಿದಳೆನ್ನಲ್ಲಿ ಮೋಸ | ಎಳ್ಳನಿತು |
ಬರದು ನಿಜ ತೋರು ತೋಷ|| ೧ || 325 ||

**ಶಂಕರಾಭರಣ - ಮಟ್ಟೆ**
ನಿನಗೆ ರಾತ್ರಿ ಎನಗೆ ಹಗಲು |
ಅನಘವಾದುದಘವು ದುಷ್ಟ |
ಮನವು ಮೆಚ್ಚದಸುರ ಭ್ರಷ್ಟ | ಬಣಗು ಶುನಕನೆ || ೧ || 326 ||

**ಕೇದಾರಗೌಳ - ಝಂಪೆ**
ದುರುಳನೆಂದೆನಲು ನೀನು | ಪರನಾರಿ |
ಯರ ಸಹೋದರನು ನಾನು ||
ಹರನೊಲಿದ ನೀನೊಲಿಯೆಯ | ಸ್ವಾತಂತ್ರ್ಯ |
ವಿರದು ಬಾ ಬಿಡೆ ನಿಶ್ಚಯ || ೧ || 327 ||

**ಭಾಮಿನಿ**
ಅರಿತಿಹೆನು ಪರಿಣಯದ ಪರಿಯಂ |
ತರವು ಪಡೆದವನಾಜ್ಞೆ ಪತಿವಶ |
ಕಿರುವುದಾತ್ಮಜರಿಚ್ಛೆಯೆಂಬುದ ಪೋಗು ಪಿತನೆಡೆಗೆ ||
ವರುಷ ಹತ್ತರೊಳಹುದು ಸ್ಮರವಶ |
ಬರಿಯ ಗುಲ್ಲಿದು ನಿದ್ದೆಗೇಡೆಲೆ |
ಧಿರುರೆ ಬಿಡೆನೆಂದಪ್ಪಲೈದಲ್ಕನಿತರಲ್ಲಿತ್ತ || ೧ || 328 ||

**ಮುಖಾರಿ - ಏಕ**
ಆಡುತ್ತಾಡುತ್ತ ಬಂದ ನಹುಷ | ಕೈರಾತರ ಮೇಳದಿ |
ಆಡುತ್ತಾಡುತ್ತ ಬಂದ ನಹುಷ ||
ಆಡುತ್ತ ಸಚಿವನ | ಕೂಡುತ್ತ ಖಳನಿರ |
ನೋಡುತ್ತ ತಡಿಯೆಂ | ದಾಡುತ್ತ ಬೇಗ || ೧ || 329 ||

**ಮಾರವಿ - ಏಕ**
ಘಡ ಘಡ ತಡಿ ತಡಿ | ಎಡಗೊಡೆನಡಿಯಿಡೆ |
ಬಿಡೆ ಬಿಡೆ ಕಡುಗಲಿಯ ||
ಹೊಡಿ ಹೊಡಿ ಕಡಿ ಕಡಿ | ದಡಗೆಡದೊಡೆ ಕಡೆ |
ಗಡಿಗಡಿಗುಡುಗೊರೆಯ || ೧ ||

ಇತ್ತಪೆನೆನಲಾ | ಮೊತ್ತವು ಬಲು ಮುಂ|
ದೊತ್ತಲು ಶಬರೇಶ ||
ಅತ್ತಲು ದುರ್ಮತಿ | ಕತ್ತಿಯೊಳೆಲ್ಲರ |
ಮತ್ತೆಸಗಿದ ನಾಶ || ೨ ||

ಎಲೆ ಎಲೆ ಕೇಳ್ವಾರ್ಕ್ಯ | ತಲೆ ನೆಲಕುರುಳಿಪೆ |
ನೆಲನಿಲದಧಟುತನ ||
ಬಲ ಜಲಧಿಯ ಗೆ | ದ್ದಳಲಳಿಪೆನು ಪಲ್ |
ಗಳ ಕಳಚುವೆ ನಿನ್ನ || ೩ ||

ಪ್ರಾಣಭಯದಿ ಹಿಂ | ಗಾಣದೆ ಓಡುವ |
ಪ್ರಾಣಿಗಳನು ಕೊಂದು ||
ಪ್ರಾಣ ಪೊರೆವ ನಿ | ತ್ರಾಣಿ ಶಬರ ನಿಲು |
ಬಾಣದ ಸವಿ ತಿಳಿದು || ೪ ||

ಮಳ್ಳಪ್ಪನೆಯಂ | ತಳ್ಳಿಯು ಕೊಳ್ಳಿಗೆ |
ಬಳ್ಳಿ ಹೆಣವ ತಿಂದು ||
ದೊಳ್ಳು ಬೆಳೆಸಿ ಪಳ್ | ಪಳ್ ಮಾತಾಡುವೆ |
ಕಳ್ಳ ಸುರಿಪೆನಿಂದು || ೫ || 334 ||

**ಘಂಟಾರವ - ಅಷ್ಟ**
ಕೇಳಿ ದುರ್ಮತಿ | ತಾಳೆನುತೆಸಲವ ||
ತಾಳಿ ಮೂರ್ಛೆಯ | ಬೀಳೆ ಸಚಿವ ಸು |
ಶೀಲ ಪೊಡೆದನು ಖೂಳಗೆ || ೧ ||

ಧಿರುರೆ ಯುದ್ಧದಿ | ಧುರಮತಿ ಎನ್ನುವ ||
ಬಿರಿದನಾಂತಿಹೆ | ತರಿವೆ ಶಿರವೆನು |
ತೆರಗಿದನು ಶರದಿಂದಲಿ || ೨ ||

ಮಂತ್ರಿ ಭೇದಿಸಿ | ಮಂತ್ರಾಸ್ತ್ರವೆಚ್ಚು ದು ||
ರ್ಮಂಥನಂ ಕೊಲ | ಲಂತಕನೊಲ್ಪೈ |
ದಿಂತುಸುರೆ ನೀಲಾಕ್ಷನು || ೩ || 337 ||

**ಭೈರವಿ - ಏಕ**
ದುರ್ಮತಿಯನು ಸಂಗರದಿ | ಗೆ |
ದ್ದೋರ್ಮೆಯೊಳೀ ರಣಕಣದಿ ||
ಹೆಮ್ಮೆಯ ನಡೆಸಲು ಬೇಡ | ನಡೆ |
ಒಮ್ಮನದಿಂದಲಿ ಗಾಢ || ೧ ||

ನೀಲಾಕ್ಷನೆ ಬಡ ಎತ್ತು | ದರೆ |
ಮೇಲಿಹ ತೃಣಕಾಸತ್ತು ||
ಕಾಲನ ಪುರ ಕಂಡಂತೆ | ನಿ |
ನ್ನಾಲೋಚನೆ ನಡೆ ಪಿಂತೆ || ೨ ||

ಮನುಜಾಧಮ ಕೇಳೊಂದು | ತು |
ತ್ರಿನಲಹೆ ನೀನೆನಗಿಂದು ||
ಎನುತೆಸಲೆಚ್ಚ ಸುಶೀಲ | ಬಿ |
ದ್ದನು ಮೃತಿ ಹೊಂದುತ ನೀಲ || ೩ || 340 ||

**ಶಂಕರಾಭರಣ - ಮಟ್ಟೆ**
ಕಂಡು ಹುಂಡಭವನು ಪ್ರಳಯ |
ರುಂಡಮಾಲನಂತೆ ಕೋಪ |
ಗೊಂಡು ಪೊಡೆಯೆ ಬಿದ್ದನಾಗ | ಚಂಡವಿಕ್ರಮಿ || ೧ ||

ನೋಡಿ ನಹುಷ ತಡೆಯುತೆಂದ |
ಮೂಢ ಕೇಳು ಲಲನೆಯಾಸೆ |
ಮಾಡಬೇಡ ಬಿಡೆನು ನಡೆ ದ | ರೋಡೆ ಮಾಡದೆ || ೨ ||

ಕಾರಣವನು ಪೆಸರು ಪೆತ್ತ |
ರಾರು ನಿನ್ನ ನೀನು ತಡೆಯೆ |
ನಾರಿಗಿಷ್ಟ ನೆಂಟ ಬಂಧು | ವಾರು ಪೇಳೆಲ || ೩ ||

ಚಂದ್ರವಂಶಜಾಯುರಾಖ್ಯ |
ಕಂದ ನಹುಷ ವಿಪ್ರನಾರಿ |
ವೃಂದ ಗೋಧರೆಯನು ಪೊರೆಯೆ | ಬಂಧುವೇತಕೊ || ೪ ||

ಅಂದು ತಂದೆಯನ್ನು ಕೊಂದ |
ಹಂದೆ ಬಂದೆಯೇನು ಇಂದೆ |
ಅಂದ ಕಂದಿ ಕುಂದಿಸುವೆನು | ಒಂದೆ ಶರದಲಿ || ೫ || 345 ||

**ಭೈರವಿ - ಅಷ್ಟ**
ದುರುಳ ಹುಂಡನ ಸುತನು | ನಿಶ್ಚಯ ವೃತ್ತಿ |
ಪರಿಕಿಸಿ ತಿಳಿದೆ ನಾನು ||
ಉರಿವ ದೀಪಕೆ ಪ್ರಾಣ | ತೆರುವ ಪತಂಗದಂ |
ತೆರಗುವೆ ಕುಲಹೀನನೆ || ೧ ||

ಕುಲದ ವಿಚಾರವೇಕೊ | ವಧೂವರರಿಷ್ಟ |
ಕಲೆತರದೊಂದೆ ಸಾಕೊ ||
ಫಲವನೀವುದು ಜನ್ಮ | ಬೆಳಗುವುದೊಳಿತಕ್ಕು |
ಕಲಹ ಗೈಯದಿರು ಜೋಕೆ || ೨ ||

ನಿನ್ನ ತಂದೆಯನು ಹಿಂದೆ | ಯುದ್ಧದಿ ಕೊಂದು |
ದನ್ನೀಗ ನೀನೊರೆದೆ ||
ಹೆಣ್ಣಿನ ಭ್ರಮೆಯಿಂದ | ಕಣ್ಣು ಕಾಣಿಸದೀಗ |
ಮಣ್ಣಿಗೆ ಕೂಡಿಸುವೆ || ೩ ||

ಕೇಳಿ ವಿಹುಂಡ ಬಲು | ಬಾಣವನೆಚ್ಚ |
ಸೀಳಿ ನಹುಷನೆಸಲು ||
ಖೂಳ ಗದೆಯೊಳಿಟ್ಟ | ತಾಳಿ ಮೂರ್ಛೆಯನೆದ್ದು |
ಕಾಳಗ ಕೊಡು ಎಂದನು || ೪ || 349 ||

**ಕಂದ ಪದ್ಯ**
ಕರದಿಂ ತೋರುವೆನೆಂದ |
ಬ್ಬರಿಸುತ ಶಕ್ತ್ಯಸ್ತ್ರವಂ ಬಿಡಲು ಖಳನೊರಗಲ್ ||
ಪರಿಕಿಸಿ ಸುಂದರಿ ನಹುಷಂ |
ಗೆರಗುತ ವಯ್ಯಾರ ಲಜ್ಜೆಯಿಂದಿಂತೆಂದಳ್ || ೧ || 350 ||

**ಶಂಕರಾಭರಣ - ಆದಿ**
ಸುಲಲಿತ ರೂಪ ಕೋಮಲಗಾತ್ರ | ಪುಣ್ಯ |
ಫಲಗಳಿಂದಲಿ ದೊರಕಿದೆ ಮಾತ್ರ || ಪ ||
ಕಮಲನಯನ ಚಂಪಕನಾಸ | ನೀಡು |
ವಿಮಲಹೃದಯ ತವ ಕರುಣಾರಸ ||
ಮಮ ಮನ ಸೋತುದೀಕ್ಷಿಸು ಮಾನ | ಪ್ರಾಣ |
ರಮಣನೆ ನಂಬಿಕೊಂಡಿಹೆ ನಿನ್ನ || ೧ || 351 ||

**ಆನಂದಭೈರವಿ - ಅಷ್ಟ**
ಏನನುಸುರುವೆನು | ಈ ವಿಷಯಕಿ |
ನ್ನೇನನುಸುರುವೆನು || ಪ ||
ಕಾನನಕ್ಕೈತಂದ ಬೇಟೆಗೆ |
ದಾನವನ ದುಷ್ಕೃತಿಯ ಸೈರಿಸ |
ದಾನು ಧರ್ಮವ ಕಾಯ್ದೆನಲ್ಲದೆ |
ಮಾನಿನಿಯೆ ನಿನ್ನಾಸೆಗಲ್ಲವು || ೧ || 352 ||

**ಶಂಕರಾಭರಣ - ಆದಿ**
ಆಸೆಯಿಂ ಬರದಿರಲೇನಾಯ್ತು | ಎನ್ನ |
ನೀ ಸಮಯದಿ ಬಿಡಲಿರ ಹೋಯ್ತು ||
ಆ ಸರಸಿಜನ ಸಂಕಲ್ಪದಲಿ | ಬಂದೆ |
ನೀ ಸುಧಾಕರಮುಖಿ ವಹಿಲದಲಿ || ೧ || 353 ||

**ಆನಂದಭೈರವಿ - ಅಷ್ಟ**
ಚಂದನಗಂಧಿನಿಯೆ | ಪಟ್ಟಣದೊಳು |
ತಂದೆ ತಾಯಿಗಳರಿಯೆ ||
ಮುಂದೆ ವೈವಾಹವನು ಗೈಸುವ |
ದಿಂದನುಜ್ಞೆಯ ಪೊಂದದಾಮನ |
ಬಂದ ತೆರ ಗೈಯುವುದು ನ್ಯಾಯವೆ |
ಸುಂದರಾಂಗಿಯೆ ಸಾಕು ಬಿಡು ಬಿಡು || ೧ || 354 ||

**ಶಂಕರಾಭರಣ - ಆದಿ**
ಶರಣು ಪೊಕ್ಕರನು ರಕ್ಷಿಪ ಧರ್ಮ | ಕ್ಷತ್ರಿ |
ಯರಿಗಿರಲೆಂತು ತೊರೆವ ಕರ್ಮ ||
ಸರಿಯೆಂತು ಓಪಳ ತ್ಯಜಿಸುವುದು | ನಾಥ |
ಚರಣಕೆರಗುವೆನು ಸಲಹುವುದು || ೧ || 355 ||

**ಆನಂದಭೈರವಿ - ಅಷ್ಟ**
ಕಂತುವಿನರಗಿಣಿಯೆ | ಸೌದಾಮನಿ |
ಯಂತೆ ಪೊಳೆವ ಬಾಲೆಯೆ ||
ಕಾಂತೆ ವಿಧಿವಶವೆಂತೊ ತಿಳಿಯದು |
ದಂತಿಗಾಮಿನಿ ಬೆದರಬೇಡೆಲೆ |
ಚಿಂತಿತವ ಪಿತಗೊರೆವೆ ಜೊತೆಯಲಿ |
ಸಂತಸದಿ ಬಾ ನಿನ್ನ ಚಿತ್ತಕೆ || ೧ || 356 ||

**ಭಾಮಿನಿ**
ವ್ರತಿಗಳಿರ ಕೇಳಿರಿ ನಹುಷನಿಂ |
ತತಿಮಧುರವಚನದಲಿ ಸಂತೈ |
ಸುತಿರೆ ಇತ್ತ ವಿಹುಂಡನೆಚ್ಚತ್ತೆದ್ದು ಬರಲಾಗ ||
ದಿತಿಜ ನಿಲ್ಲೆನುತಾರ್ಭಟಿಸಿ ಪೊ |
ಯ್ದತಿಶರಾಳಿಯೊಳೆಚ್ಚಡದ ತರಿ |
ದತುಲ ಮೋಹನ ಶರದಿ ಮಲಗಿಸುತೆಂದ ಸುಂದರಿಗೆ || ೧ || 357 ||

**ಕಾಂಬೋಧಿ - ಝಂಪೆ**
ಧುರದಿರವಶೋಕಸುಂ | ದರಿಯೆ ಗುಣಮಂದಿರೆಯೆ |
ಪರಿಕಿಸಿದೆಯೇನೆ ವಿಕ್ರಮವ ||
ಹರಿಹರಾದಿಗಳಡ್ಡ | ಬರಲಂಜೆ ಯೌವನೈ |
ಶ್ವರ್ಯ ಸುಂದರ ರೂಪನಿಹೆನು || ೧ ||

ಕುಲವ ಶೋಧಿಸೆ ಮೌನಿ | ತಿಲಕ ಕಶ್ಯಪನಾದಿ |
ಬಲವ ಕಣ್ಣಾರೆ ನೋಡಿದೆಯ ||
ಛಲವನಿದರಂತೆ ನಾ | ತೊಲಗಿಸೆನು ಮನದ ಚಂ |
ಚಲ ಬೇಡ ಬಾರೆನ್ನ ರಮಣಿ || ೨ ||

ದುಷ್ಟ ದೂರದಿ ನಿಲ್ಲು | ಮುಟ್ಟದಿರನಾಥರನು |
ದಿಟ್ಟಿಸುವ ದೇವನಿಹನರಿಯೇ ||
ಎಷ್ಟು ಬಲವಿರೆ ದೈವ | ದಿಷ್ಟ ಬಲಕೆಣೆಯೆ ಮೃತಿ |
ಕಟ್ಟು ಸೆರಗಲಿ ಗಂಟ ನಿನಗೆ || ೩ || 360 ||

**ಸುರುಟಿ - ಏಕ**
ಮರಣಕೆ ಭಯ ಪಡೆನು | ಎಂದಾ |
ದರು ಪೋಗುವುದು ತನು ||
ಸ್ಮರಕದನವ ನಿ | ನ್ನೆರಕದಿ ಗೈದೀ |
ಹರಣವು ಪೋದರೆ | ಮರುಗೆನು ನಿಶ್ಚಯ || ೧ ||

ತರುಣಿಯೆ ಕೊನೆಗೊಂದು | ಗುಟ್ಟಿನ |
ಪರಿಯುಸುರುವೆನೊಂದು ||
ಪರಿಣಯ ಕಾರ್ಯ | ಕ್ಕರೆ ಬೀಳಲಿ ಸ್ಮರ |
ಶರದುರಿಯಂ ಪರಿ | ಹರಿಸೀಗೈದುವೆ || ೨ ||

ಆಸೆಯು ಬಲು ದುಃಖ | ಜಗದಿ ನಿ |
ರಾಸೆಯು ಪರಮಸುಖ ||
ದೋಷಿಯೆ ತೊಲಗೆಂ | ಬಾ ಸಮಯ ನಹುಷ |
ಕೇಸರಿಯಂತೆ | ದ್ವಾದಶರಗೆಂದನು || ೩ || 363 ||

**ಸೌರಾಷ್ಟ್ರ - ತ್ರಿವುಡೆ**
ಪರವಧುವನಪಹರಿಸಲಿಚ್ಛಿಪ |
ದುರುಳ ನೀ ಬೇರರಿತರಿಂಗೆಲೆ |
ಕುರುಹದೇಕಟ್ಟುವೆನು ಹುಂಡನ | ಸರಿಸಕಿಂದು || ೧ ||

ಕುನ್ನಿ ಬಾಯ್ಮುಚ್ಚಿಲೊ ಬಡವೆ ಪರ |
ಕನ್ಯೆಯೆಂದಿನ್ನೊರೆದರಾಗದು |
ಮುನ್ನನಗ್ನಿಕ ಲಗ್ನವಿಲ್ಲವ | ಳನ್ನೊಲಿಸುವೆ || ೨ ||

ಒಪ್ಪದಿರಲವಳನ್ಯ ಕುವರಿಯ |
ತಪ್ಪದೊಲಿಸಲ್ಲದಿರೆ ನಿನ್ನ |
ನ್ನಪ್ಪಳಿಸುತಂತಕನಿಗೀಕ್ಷಣ | ಒಪ್ಪಿಸುವೆನು || ೩ ||

ಜಲಧಿಜೀವನಕಾರದಪ್ಪಣೆ |
ತೊಲಗು ತೊಲಗೆಂದೆಚ್ಚಡೆಚ್ಚನು |
ಕೊಳುಗುಳದಿ ಕಂಗೆಟ್ಟು ನಹುಷನು | ಕಳವಳಿಸಿದ || ೪ || 367 ||

**ದೇಶಿ - ಏಕ**

ಎಷ್ಟು ವಿಧದಾಯುಧವ ಶರವ | ಪೊಡೆದೆ ನಾನು || ಸೂತ |
ನಷ್ಟವಾದರೆಸಗಿಧುರವ | ಗೈದೆನಿನ್ನು || ೧ ||

ಧಾತನೊಲುಮೆ ಸುರರ ಸಖ್ಯ | ಏನಿದೇನು || ಪೋಪ |
ಮಾತು ಮೌನಿ ವಿದ್ಯೆ ಮುಖ್ಯ || ಏನಿದೇನು || ೨ ||

ಪೆರ್ಮೆಯಿಂದ ಬಂದುದಲ್ಲ | ನೋಡು ನೋಡು || ನಿನ್ನ |
ಧರ್ಮಸಂಸ್ಥಾಪನೆಯಿದಲ್ಲ| ನೋಡು ನೋಡು || ೩ ||

ಆರು ಕಾಯ್ವರೆನ್ನನಿಲ್ಲಿ | ದೇವ ದೇವ || ಹಿಂದೆ |
ತೋರಿದಂಥ ಸತ್ತ್ವವೆಲ್ಲಿ | ದೇವ ದೇವ || ೪ || 371 ||

**ಭಾಮಿನಿ**

ಹಲವು ಪರಿಯನ್ನಿಂತೆಣಿಸಿ ಜಯ |
ಲಲನೆಗೋಸುಗ ಚಿಂತಿಸುತ್ತಿರ |
ಲೊಲಿದು ನಾರದ ಬಂದು ನಹುಷಂಗೆಂದ ವರದಿರವ ||
ಒಲಿದು ನುತಿಸೈ ಪುರುಷ ಪ್ರಕೃತಿಗ |
ಳೊಳಗೆ ಮಾಯೆಯ ಜಯವ ಹೊಂದುವೆ |
ಸುಲಭದಿಂದೆನುತೈದೆ ನಾರಾಯಣಿಯ ನುತಿಸಿದನು || ೧ || 372 ||

**ಕಾಪಿ - ಅಷ್ಟ**

ನಾರಾಯಣಿ ಜಯ ಜಯತು | ಭಕ್ತ |
ಪಾರಾಯಣಿ ಜಯ | ಕಾಣೆ ನೀ ಹೊರತು || ಪ ||
ಸೇರಿದೆ ನಿನ್ನ ಪಾದವನು | ದುಷ್ಟ |
ಹಾರಿಣಿ ಜವದಿಂದ ಕಾಪಾಡು ನೀನು || ಅ.ಪ ||
ಹರಿ ಭೂತನಾಥ ಸ್ವಯಂಭೂ ರೂಪಿಣಿಯೇ | ಪುರಂ |
ದರ ವಹ್ನಿ ಕಾಲ ಪುಣ್ಯಜನ ವಾರುಣಿಯೇ ||
ಮರುತ ಕುಬೇರಾರ್ಕ ಶಶಿ ಸ್ಕಂದರೂಪೇ | ನಿನ್ನ |
ಹೊರತುಂಟೆ ಚೇತನ ಮರುಕ ವಿಧೂಪೇ || ೧ ||

ವೇದಸನ್ನುತೆ ಲೋಕಕಲ್ಯಾಣಕಾಗಿ | ಪುಟ್ಟಿ |
ಸಾಧಿಸಿ ನಾನಾವತಾರ ಲೇಸಾಗಿ ||
ಭೇದ ವಿರೋಧವ ನಾಶ ಮಾಡುತಲಿ | ರಕ್ಷಿ |
ಪಾದಿಮಾಯೆಯೆ ಶಾಂತಿ ನೀಡು ಬಂದಿಲ್ಲಿ || ೨ || 374 ||

**ಕಂದ ಪದ್ಯ**

ನಾರಾಯಣಿ ಬೆಡಗಿಂ ಮೈ |
ದೋರೆ ತ್ರಿಪುರಸುಂದರೀ ಪೆಸರಿನೊಳು ನಹುಷಂ ||
ಕಾರಣ ತಿಳುಹಲ್ಕಭಯವ |
ತೋರಿ ಧನುವಿಡಿದು ವಿಹುಂಡಗಿದಿರಾಂತೆಂದಳ್ || ೧ || 375 ||

**ಜಂಜೂಟಿ - ಅಷ್ಟ**
ಕೇಳು ವಿಹುಂಡನೆ ನೀನು | ವ್ಯರ್ಥ |
ಹಾಳು ಮಾಡುವೆ ದೇಹವನ್ನು ||
ಬಾಲೆಯಾಸೆಯ ಬಿಡು | ತಾಲಯವನು ಸೇರು ||
ಖೂಳತನದಿಂ ಧುರವ ಗೈದರೆ |
ಕಾಲನನು ತೋರಿಸುವೆನೀಕ್ಷಣ || ೧ ||

ಕುಡಿ ಮೀಸೆ ತಿರುಹುತ್ತಲೆಂದ | ಸ್ತ್ರೀಯ |
ರೊಡನೊಂದು ಧುರ ಬಲು ಚಂದ ||
ಮಡದಿಯಾಗಿರು ಶಯ್ಯೆ | ಯಡರಿ ಯುದ್ಧವ ಗೈವ ||
ಎಡಬಲವ ಶೋಧಿಸುವ ಸಾಹಸ |
ದೃಢ ಛಲವ ನೋಡೆನ್ನ ಶಕ್ತಿಯ || ೨ ||

ಸ್ಮರಶರ ಪೈಶಾಚ ನಿನ್ನ | ಹೊಂದಿ |
ಮರುಳು ಗೈಸಿದೆ ಬಿಡಿಸುವೆ ನಾ ||
ವಿರಚಿಪ ರಣದಿ ಕಂ | ಧರ ಧರೆಗಿಳುಹುತ್ತ ||
ಭರದಿ ಮೃತ್ಯುವ ಲಗ್ನ ಗೈಸುವೆ |
ಪರಿಯ ನೋಡೆಂದೆಚ್ಚಡೆಂದನು || ೩ || 378 ||

**ಭಾಮಿನಿ**
ಸಿರಿ ಸರಸ್ವತಿ ಗಿರಿಜೆ ಶಚಿ ಸು |
ಸ್ವರೆ ತಿಲೋತ್ತಮೆ ರಂಭೆಯೂರ್ವಶಿ |
ಯುರಗಸತಿ ಮೇನಕೆ ಘೃತಾಚ್ಯುಂಜಿಕೆ ವೃಕಸ್ಥೆ ರತಿ ||
ಸುರಪಸುತೆ ವಿಶ್ವಾಚಿ ರೋಹಿಣಿ |
ಯರ ಮಿಗಿಲು ಸೌಂದರ್ಯಲಕ್ಷಣ |
ಕರಭರಿತೆ ಕೊಲಲಾಸೆಯಪ್ಪುದು ಗೆಲಲು ಫಲವೇನು || ೧ || 379 ||

**ಭೈರವಿ - ಮಟ್ಟೆ**
ಸಮರದಾಸೆ ತ್ರಿಪುರಸುಂದರಿ | ಗೈಯಬೇಡ |
ಕಮಲಮುಖಿಯಶೋಕಸುಂದರಿ ||
ಅಮಮ ಸಾವಿರಾರು ಸುಳ್ಳ |
ಕ್ರಮದಿ ಪೇಳಿ ಲಗ್ನ ಗೈಸ |
ಲಮಿತಪುಣ್ಯ ಮಿಕ್ಕು ಮಿಕ್ಕು |
ತುಮುಲ ಗೈದರಳಿಯುವೀಗ || ೧ ||

ಬರಿದೆ ಬೊಗುಳಬೇಡ ಯುದ್ಧದಿ | ಸಾಯುವಾತ |
ನಿರುವೆ ಎಂದು ಪೊಯ್ದಳಿಬ್ಬದಿ ||
ವರಕೃಶಾನು ತಿಮಿರ ಶೈಲ |
ಮರುತ ವಜ್ರ ಶಕ್ತಿ ಸರ್ಪ |
ತರಣಿ ಖಡ್ಗ ದಂಡ ಗದೆಯ |
ಕರದಿ ಪಿಡಿದು ತರಿದನಂದು || ೨ ||

ಶೂಲ ಬಿಡಲು ಮೂರ್ಛೆ ಹೊಂದುತ | ಎದ್ದು ಬರಲು |
ಕಾಲಚಕ್ರ ಬಿಡಲು ಸುಳಿಯುತ ||
ಬಾಲೆಯೆಡೆಗೆ ಬರಲು ಕಂಡು |
ತಾಳುತಚ್ಚರಿಯವನಂದು |
ಮೂಲ ತಿಳಿದಳಾಯುಧದೊಳು |
ಖೂಳ ಸಾಯನೆಂಬ ವಿಧಿಯ || ೩ || 382 ||

**ಘಂಟಾರವ - ಅಷ್ಟ**
ಆದಿಮಾಯೆಯು | ಘೋರರೂಪವನಾಂತು ||
ಐದೆ ಖಳ ನೋಡಲ್ಕೆ ಬೆರಸಿದ |
ಆ ದನುಜನನು ರೋಷದಿ || ೧ ||

ಎತ್ತ ಪೋದರು | ಮಾಯೆಯ ಗೆಲುವೆನೆ ||
ನುತ್ತ ಬಿದ್ದನು | ಎತ್ತಿ ತಿರುತಿರು |
ಹುತ್ತ ಬಡಿದಳು ಪೃಥ್ವಿಗೆ || ೨ ||

ಕಾರಿತೆಂಜಲ | ನದಿಯಂತ್ಯೆದಲು ಪರಿ |
ವಾರ ಶಾಕಿನಿ ಗಣಗಳೋಕುಳಿ |
ಸೇರಿ ಶಿರ ಚಂಡಾಡಲು || ೩ ||

ಪರಿಯ ನೋಡಿದ | ರರರೆ ಕಂಬದಿ ಬಂದ ||
ನರಹರಿಯೆ ಇವಳೆಂಬ ಪರಿಯಿಂ |
ದಿರೆ ನುತಿಸಿದರು ದೈನ್ಯದಿ || ೪ ||

ಕೋಪ ನೀಗಲ್ಕೆ | ರೂಪ ಸುಂದರಮಾಗೆ ||
ಈ ಪತಿವ್ರತೆ ಗೂಡಿ ಸುಖ ಸಂ |
ಲಾಪದಿಂದಿಹುದೆಂದಳು || ೫ || 387 ||

**ಭಾಮಿನಿ**
ಎರಗಿ ನಹುಷನು ಪೇಳ್ದ ದೇವಿಗೆ |
ಪುರದಿ ಪಿತೃಮಾತೆಯರನುಜ್ಞೆಯ |
ಧರಿಸಿ ಪರಿಣಯ ಮಾಡಿಕೊಂಬುವೆನೆನಲು ಕುಜಜಾತೆ ||
ಹರಗಿರಿಜೆಯರ ಸ್ಮರಿಸೆ ಗುಹ ಗಣ |
ಪರ ಪ್ರಮಥ ಪಾರಿಷದ ಚಂಡೀ |
ಶ್ವರ ಮಹಾಕಾಳಾಖ್ಯ ಭೈರವ ಭೃಂಗಿ ಜೊತೆ ಪೊರಟ || ೧ || 388 ||

**ವಾರ್ಧಕ**
ವರವೃಷಭವನ್ನೇರಿ ಪರಿವಾರಮಂ ಸೇರಿ |
ಹರಿತಂದಶೋಕಸುಂದರಿಯ ತಕ್ಕಿಸೆ ವಸುಂ |
ಧರೆಯಾಣ್ಮಸಂಭೂತನೆರಗಿ ನುತಿಸಲು ಭೂತವರ ನಹುಷನವರ ಕಂಡು ||
ಕರದಿಂದ ತಡವರಿಸಿ ಕರೆದೆಲ್ಲರಂ ವೆರಸಿ |
ಬರಲು ಮಾಹಿಷ್ಮತಿಗೆ ಪುರವ ಶೃಂಗರಿಸಿ ಮಿಗೆ |
ಪರಿಣಯವ ಶಂಕರೀಹರ ನೃಪತಿಗೈದರೀ ಪರಿಯೊಳೆತ್ತಿದರಾರತಿ || ೧ || 389 ||

**ಸಾವೇರಿ - ತ್ರಿವುಡೆ**
ಮಂಗಲಾರತಿ ಎತ್ತಿರೆ | ವಧುವರರೀಗೆ |
ಮಂಗಲಾರತಿ ಎತ್ತಿರೇ || ಪ ||
ಮಂಗಲಾರತಿ ಎತ್ತಿರೇ ಭೂ |
ಮ್ಯಂಗನೋದ್ಭವಜಾತೆ ನಹುಷಂ |
ಗಂಗನೆಯರೆಲ್ಲರು ಸುತೋಷದಿ |
ರಂಗು ಮಾಣಿಕ ಮೂರುತಿಗಳೊಳು || ಅ.ಪ ||
ಧೀರ ನಹುಷನಿಗಾಗ | ಸುಂದರಿಯನ್ನು |
ಧಾರೆಯನೆರೆದನಾಗ ||
ಧಾರಿ ಸುಕೃತಗಳೆಂತುಟೋ ಬೃಂ |
ದಾರಕರ ಸಖಿಗಚರಭವೆ ಶೃಂ |
ಗಾರೆ ಪುಣ್ಯಾಂಬುನಿಧಿ ಸುಂದರ |
ಮೂರುತಿಗೆ ಜಯವೆಂದು ಕುಶಲದಿ || ೧ ||

ಗಿರಿಜೆ ಶಂಕರರನಂದು | ದಕ್ಷಿಣದಿ ಕು |
ಳ್ಳಿರಿಸಿ ಪಾಡುತ ನಲಿದು ||
ಹರಳಿನಾರತಿಯನ್ನು ಪಿಡಿಯುತ |
ಹರಿಣನಯನೆಯರೀರ್ವರೇಳುತ |
ಹರಿಧರಗು ಹರಿವೇಣಿಗೌರಿಗು |
ಹರಿಯರಿಯ ಹರಿಸಿದಗೆ ಸುದತಿಗೆ || ೨ ||

ಭೇರಿ ತಂಬಟೆ ಕಹಳಾ | ವಾದ್ಯಗಳೆಲ್ಲ |
ಭೋರಿಡುತಿರೆ ಬಹಳ ||
ಹೀರಧರ ಪೂಮಳೆಯ ಕರೆಯಲು |
ವಾರನಾರಿಯರೆಲ್ಲ ನರ್ತಿಸೆ |
ಸಾರಸಾನನೆ ಸೋಮಮತಿ ಮುದ |
ವಾರಿಧಿಯೊಳಾಡುತಿರೆ ನಗುತಲಿ || ೩ || 392 ||

**ವಾರ್ಧಕ**
ಕುಲಪುರೋಹಿತ ಧೌಮ್ಯರಿಷ್ಟದಂತೆಲ್ಲವಂ |
ಸಲಿಸುತಾಯುಭೂಪನೂಟದಕ್ಷಿಣೆಯುಚಿತ |
ಗಳೊಳು ಸರ್ವರ ದಣಿಸಿ ತ್ರೈಕರಣಶುದ್ಧಿಯಿಂದುಮೆಹರರ್ಗೆರಗುತೆಂದ ||
ಒಲಿದು ಶಿವಸಾಯುಜ್ಯ ನೀಡೆನ್ನ ಪುರಪ್ರಾಣಿ |
ಗಳಿಗೆನಲ್ಕಿಹ ಸುಖವನುಂಡು ಬಹುದೆಂದು ಮಂ |
ಗಳೆಯುಗ್ರಮಾಯೆ ದಳ ತೆರಳಲಮರೇಂದ್ರನಂತವನೀಶ ಮೆರೆದಿರ್ದನು || ೧ || 393 ||

**ದ್ವಿಪದಿ**
ಇಂತು ವಿಸ್ತರಿಸಿ ಯಾಜ್ಞಿಕರಿಂಗೆ ಸೂತ |
ಸಂತಸದೊಳೊರೆದುದನ್ನಿಂದಿಂತು ಸೀತಾ || ೧ ||

ರಾಮಶಿಕ್ಷಕನಾತ್ಮಭವ ಕಮಲಮಿತ್ರ |
ರಾಮನನುಜಾಖ್ಯಾಶ್ವಲಾಯನ ಸುಸೂತ್ರ || ೨ ||

ಕಾಶ್ಯಪೀದೇವ ಕಾಶ್ಯಪಗೋತ್ರದವನು |
ಕಾಶ್ಯಪೀಶನ ಕರುಣೆಯಿಂದ ಗೈದಿಹನು || ೩ ||

"ಕೊ"ಡಸೆ ಬುಡ ಗಿ"ರಿ"ಜೆ ನಡು ಗಂ"ಗೆ" ತುದಿ ನೋಡೆ |
ಒಡನೂರ ಪೆಸರಕ್ಕರದ ಸಂಜ್ಞೆ ಕೂಡೆ || ೪ ||

ಮಸದೇಕ ಶಕ ಶಾಲಿವಾಹ ನಂದನದ ||
ವೃಷಭಸಿತ ಜ್ಯೇಷ್ಠ ಶಿವಸುತನ ವಾಸರದ || ೫ ||

ಬೆನಕ ತಿಥಿ ಪಂಚಾಸ್ಯ ಲಗ್ನಕಿದು ಗೈದು |
ವನಜಮುಖಿ ಶಾರದೆಯ ದಯದಿ ಮುಗಿದಿಹುದು || ೬ ||

ಪ್ರಾಸ ಗಣ ಲಯ ಮಾತ್ರೆ ಸಂಧಿ ವಿಗ್ರಹವ |
ದೋಷ ಹದಿನೆಂಟು ಶಬ್ದಾರ್ಥಸಂಗ್ರಹವ || ೭ ||

ಅರಿಯೆ ಹರಿಚರಿತೆಯೆಂದೋದಿ ಪ್ರಕಟಿಪುದು |
ಇರೆ ವಿಷಮ ತಿದ್ದಿ ಪ್ರಾಜ್ಞರು ಮನ್ನಿಸುವುದು || ೮ || 401 ||

**ಸುರುಟಿ - ಆದಿ**
ಮಂಗಲ ಜಯ ಜಯತು | ಸತತಂ |
ಮಂಗಲ ಜಯ ಜಯತು || ಪ ||
ಮಂಗಲ ಗಣಪಗೆ | ಲಿಂಗಸ್ವರೂಪಗೆ |
ರಂಗಗುಮೆಗೆ ತಿಮಿ | ರಂಗಳ ಹರಿಪಗೆ || ಅ.ಪ ||
ಮಂಗಲ ಶರಜನಿಗೆ | ಭೂಮಿಜೆ | ಗುಂಗುರವಿತ್ತವಗೆ ||
ಅಂಗಜನಿಗೆ ವಿ | ಶ್ವಂಗಳ ಸೃಜಿಪನಿ |
ಗಂಗೋಪಾಂಗದಿ | ಕಂಗಳು ತೋರ್ಪಗೆ || ೧ ||

ಹರಫಾಲಾಶ್ರಿತಗೆ | ಯಮನಿಗೆ | ನಿಋತಿಗೆ ವರುಣನಿಗೆ ||
ಮರುತಗೆ ಕಿನ್ನರ | ರರಸಗೆ ಪರಮೇ |
ಶ್ವರನಿಗೆ ತರಣಿಗೆ | ಶರಧಿಯ ತರಳಗೆ || ೨ ||

ಕುಜ ಬುಧ ಗುರುಗಳಿಗೆ | ಸಿತ ಶನಿ | ರಜನೀಚರರಿಂಗೆ ||
ಅಜನರಸಿಗೆ ಸರ | ಸಿಜ ನಿಜ ಸದನಗೆ |
ಕುಜನರ ಕೊಲ್ಲುವ | ಗಜರಿಪುಗಮನೆಗೆ || ೩ || 404 ||

**|| ಅಂತು ಸಂಧಿ ಎರಡಕ್ಕಂ ಪದ ೩೭೮ಕ್ಕಂ ಮಂಗಲಂ ||**

**ವಾರ್ಧಕ**
ಸಿಂಧು ಪ್ರಾಕ್ತೀರ ದಕ್ಷಿಣಕನ್ನಡದ ಜಿಲ್ಲೆ |
ಕುಂದಪುರ ತಾಲೋಕು ನಂಬ್ರ ತೊಂಬತ್ತೆಂಟ |
ಕೊಂದಿರುವ ಕೊರಿಗೆ ಗ್ರಾಮದೊಳೀರ್ದ ಸೂರ್ಯನಾರಾಯಣೋಪಾಧ್ಯಾಯನು ||
ಬಂದ ಪತ್ರಿಕೆಯೊಳಿಹ ಕರ್ಣಾಟಕದ ಸಂಘ |
ದಿಂದ ಪ್ರೋತ್ಸಾಹವಿತ್ತೆಂದು ತಿಳಿದಿದರ ಪ್ರತಿ |
ಯೊಂದ ವೀರಸ್ವಾಮಿ ಪಿಳ್ಳೈ ಸ್ಟ್ರೀಟೆಗ್ಮೋರ್ಮದ್ರಾಸೆಂಟಕಿತ್ತೀರ್ಪೆನು || ೧ || 405 ||

**ಕಂದ ಪದ್ಯ**
ಸಾವಿರ ಸನ್ನೊಂಬೈನೂ |
ರೈವತ್ತೊಂರನೆ ಜುಲಾಯಿ ಇಪ್ಪತ್ತೆಕ್ಕಂ ||
ನಾ ವಿವರಿಸಿ ಕೃತಿ ಬರೆದುಂ |
ಕೋವಿದರೀಕ್ಷಿಸುವರೆಂದಿದಂ ಕಳುಹಿರ್ಪೆಂ || ೧ || 406 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ನಿರೀಕ್ಷಿಸಲಾಗಿದೆ

**ಮೂಲ ಪ್ರಕಾಶಕರು:** ಅಪ್ರಕಟಿತ

**ಪ್ರಸಂಗ ಪ್ರತಿ ಆಧಾರ:** ಕವಿಯಿಂದ ಗಣಕೀಕೃತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ

**ಅಂತರಜಾಲ ಪ್ರತಿ ಬರವಣಿಗೆ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ವಿನ್ಯಾಸ:** ಅಶ್ವಿನಿ ಹೊದಲ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ